# ಪಂಚಮಸಾಲಿ ಜಿಲ್ಲಾ ಯುವ ಘಟಕದ ಅಧ್ಯಕ್ಷರಾಗಿ ಶಿವಕುಮಾರ್





ಹರಿಹರ, ಜೂ. 19 - ವೀರಶೈವ ಲಿಂಗಾಯತ ಪಂಚಮಸಾಲಿ ಜಿಲ್ಲಾ ಯುವ ಘಟಕದ ಅಧ್ಯಕ್ಷರಾಗಿ ಶಿವಕುಮಾರ್ ಕೆ. (ರಾಜು) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಅಧ್ಯಕ್ಷ ಬಿ.ಸಿ. ಉಮಾಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದೆ.

ಕಾರ್ಯಾಧ್ಯಕ್ಷರಾಗಿ ಬಾದಾಮಿ ಜಯಣ್ಣ, ಉಪಾಧ್ಯಕ್ಷರುಗಳಾಗಿ ಮಹಾಂತೇಶ್ ದೇಸಾಯಿ, ಉತ್ತಂಗಿ ನಾಗರಾಜ್, ಗುರುಮೂರ್ತಿ (ಹೋಟೆಲ್) ಪ್ರಧಾನ ಕಾರ್ಯದರ್ಶಿಯಾಗಿ ಕುಮಾರ್ ಹುಂಬಿ, ಸಹಕಾರ್ಯದರ್ಶಿಯಾಗಿ ಶ್ರೀಧರ್ ಸಣ್ಣಪ್ಪನವರ್, ಸಂಘಟನಾ ಕಾರ್ಯದರ್ಶಿಗಳಾಗಿ ಶಿವಕುಮಾರ್ ಹೊಸಕೇರಿ ಆಯ್ಕೆಯಾಗಿದ್ದಾರೆ.

ದಾವಣಗೆರೆ ನಗರ ಯುವ ಘಟಕದ ಅಧ್ಯಕ್ಷರಾಗಿ ಸ್ವರೂಪ ಅಂಗಡಿ, ಕಾರ್ಯಾಧ್ಯಕ್ಷರಾಗಿ ಚಂದನ್ ಪಲ್ಲಾಗಟ್ಟೆ, ಉಪಾಧ್ಯಕ್ಷರುಗಳಾಗಿ ನವೀನ್ ಎಂ.ಎಸ್. ಸೋಮೇನಹಳ್ಳಿ ಹಾಲೇಶ್, ಪ್ರಧಾನ ಕಾರ್ಯದರ್ಶಿಯಾಗಿ ಲಿಂಗೇಶ್ ಹಿರೇಗೌಡ್ರು, ಸಹಕಾರ್ಯ ದರ್ಶಿಯಾಗಿ ಸುಜಯ್ ಗೌಡ್ರು ಡಿ. ಆರ್., ಖಜಾಂಚಿ ಸಂತೋಷ್ ಬಂಕಾಪುರ, ಸಂಘಟನಾ ಕಾರ್ಯದರ್ಶಿಗಳಾಗಿ ಕೆ. ಪ್ರಸನ್ನ ಕುಮಾರ್, ಯೋಗೀಶ್ ಎನ್., ನವೀನ್ ಎನ್. ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಎಂ. ದೊಡ್ಡಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ಕಾಶಿನಾಥ, ದಾವಣಗೆರೆ ತಾಲ್ಲೂಕು ಅಧ್ಯಕ್ಷ ಎಸ್. ಮಲ್ಲಿನಾಥ, ದಾವಣಗೆರೆ ತಾಲ್ಲೂಕು ಕಾರ್ಯದರ್ಶಿ ಮಂಜುನಾಥ ಪುರವಂತರ ಕಕ್ಕರಗೊಳ್ಳ, ಜಿಲ್ಲಾ ನೌಕರರ ಘಟಕದ ಅಧ್ಯಕ್ಷ ಶ್ರೀಧರ್, ನಗರ ನೌಕರರ ಘಟಕದ ಅಧ್ಯಕ್ಷ ಕೆ.ಎಸ್.ಸುರೇಶ್, ಕೆ. ಷಣ್ಮುಖಪ್ಪ, ನಗರ ಘಟಕದ ಅಧ್ಯಕ್ಷ ಕೈದಾಳ್ ಶಿವಶಂಕರ್, ಪಂಚಮಸಾಲಿ ವಧು-ವರರ ಮಾಹಿತಿ ಕೇಂದ್ರದ ಅಧ್ಯಕ್ಷ ಎಂ.ಮಹೇಶ್ವರಪ್ಪ, ಕೆ.ಸಿ.ಉಮಾಕಾಂತ್ ನಿವೃತ್ತ ಶಿಕ್ಷಕರು, ಸಿದ್ದಪ್ಪ ಕಂಚಿಕೆರೆ, ಕಾಶೀಪುರದ ಮಲ್ಲಿಕಾರ್ಜುನಪ್ಪ ಇದ್ದರು.

ಈ ಆಯ್ಕೆ ಪ್ರಕ್ರಿಯೆಯನ್ನು ವಕೀಲರೂ ಆದ ಸಮಾಜದ ಜಿಲ್ಲಾ ಚುನಾವಣಾಧಿಕಾರಿ ಬಿ.ಬಸವರಾಜ್ ಉಚ್ಚಂಗಿದುರ್ಗ ನಡೆಸಿಕೊಟ್ಟರು.

# ಹರಿಹರ : ಯೋಗ ದಿನಾಚರಣೆಗಾಗಿ ಜಾಥಾ



ಹರಿಹರ, ಜೂ. 19 - ಜಿಲ್ಲಾ ಪಂಚಾಯತಿ ದಾವಣಗೆರೆ, ಆಯುಷ್ ಇಲಾಖೆ ದಾವಣಗೆರೆ, ಭಾರತೀಯ ಪುರಾತತ್ವ ಇಲಾಖೆ, ತಾಲ್ಲೂಕು ಆಡಳಿತ, ತಪೋವನ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ದೊಡ್ಡ ಬಾತಿ, ಸಪ್ತರಿಷಿ ಯೋಗಾಸನ ಸ್ಪೋರ್ಟ್ಸ್ ಅಕಾಡೆಮಿ ಹರಿಹರ, ಧನ್ವಂತರಿ ಆರೋಗ್ಯ ಕೇಂದ್ರ ಹರಿಹರ, ಇವರುಗಳ ಸಂಯುಕ್ತ ಆಶ್ರಯದಲ್ಲಿ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಶನಿವಾರದಂದು 'ಮಾನವೀಯತೆಗಾಗಿ ಯೋಗ' ಘೋಷ ವಾಕ್ಯದೊಂದಿಗೆ ಯೋಗ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

ಗಾಂಧಿ ಮೈದಾನದಿಂದ ಶ್ರೀ ಹರಿಹರೇಶ್ವರ ದೇವಸ್ಥಾನದವರೆಗೆ ಜಾಥಾ ನಡೆಯಿತು.

ತಹಶೀಲ್ದಾರ್ ಡಾ. ಎಂ.ಬಿ. ಅಶ್ವತ್ಥ್ ಹಾಗೂ ಡಾ. ಶಶಿಕುಮಾರ್ (ತಪೋವನ) ಅವರುಗಳು ಈ ಬೃಹತ್ ಯೋಗ ಜಾಥಾಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ, ಸಪ್ತರಿಷಿ ಯೋಗಾಸನ ಕ್ರೀಡಾ ಅಕಾಡೆಮಿ ಸಂಸ್ಥಾಪಕ ಡಾ. ಕೆ. ಜೈಮುನಿ, ಧನ್ವಂತರಿ ಪತಂಜಲಿ ಆರೋಗ್ಯ ಕೇಂದ್ರ ಹರಿಹರದ ನಿರಂಜನ, ಆಯುಷ್ ಇಲಾಖೆಯ ಡಾ. ಸುಚಿತ್ರ, ಯೋಗ ಶಿಕ್ಷಕರಾದ ಜೈರಾಮ್, ಅಜಿತ್ ಸಾವಂತ್, ನಾಗರಾಜ್ ಮೆಹರ್ವಾಡೆ, ಯೋಗ ಶಿಕ್ಷಕರಾದ ರವಿಕುಮಾರ್, ಗೀತಾ, ಸ್ವಪ್ನ ಹಾಗೂ ಕೀರ್ತಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಹೊರಗುತ್ತಿಗೆ ನೌಕರರ ಧರಣಿ ಅಂತ್ಯ




ಮಲೇಬೆನ್ನೂರು, ಜೂ.19- ಇಲ್ಲಿನ ಭದ್ರಾ ನಾಲಾ ನಂ-3 ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕಛೇರಿ ಎದುರು ಬಾಕಿ ವೇತನ ಪಾವತಿಗೆ ಆಗ್ರಹಿಸಿ ಹೊರಗುತ್ತಿಗೆ ನೌಕರರು 4 ದಿನಗಳಿಂದ ನಡೆಸುತ್ತಿದ್ದ ಧರಣಿಯನ್ನು ಶನಿವಾರ ಸಂಜೆ ಅಂತ್ಯಗೊಳಿಸಿದರು. ಹೊರಗುತ್ತಿಗೆ ನೌಕರರ ಗುತ್ತಿಗೆದಾರ ರಾಜಶೇಖರ್ ಎಂಬಾತ ಧರಣಿ ಸ್ಥಳಕ್ಕೆ ಆಗಮಿಸಿ 2 ತಿಂಗಳ ವೇತನ ನೀಡುವ ಭರವಸೆ ನೀಡಿದ್ದರಿಂದ ಧರಣಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದೇವೆ ಎಂದು ಹೊರಗುತ್ತಿಗೆ ನೌಕರರ ಸಂಘದ ಆಂಜನೇಯ ತಿಳಿಸಿದರು. ಗುತ್ತಿಗೆದಾರರ ವಿರುದ್ಧ ದಿನಗೂಲಿ ನೌಕರರು ಶನಿವಾರ ಬೆಳಿಗ್ಗೆ ಮಲೇಬೆನ್ನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ದೂರು ಸ್ವೀಕರಿಸಿದ ಪೊಲೀಸರು ಕೆಲವೇ ಹೊತ್ತಿನಲ್ಲಿ ಗುತ್ತಿಗೆದಾರರನ್ನು ಕರೆಸಿ ಧರಣಿ ನಿರತ ನೌಕರರೊಂದಿಗೆ ಸಂಧಾನ ನಡೆಸಿದ ಪರಿಣಾಮ ಕೂಡಲೇ 2 ತಿಂಗಳ ವೇತನ ನೀಡಲು ಒಪ್ಪಿದ್ದಾರೆ. ಕಾರ್ಯಪಾಲಕ ಇಂಜಿನಿಯರ್ ಪಟೇಲ್ ಎಇಇ ಸಂತೋಷ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಸಿದ್ಧಗಂಗಾ ಶ್ರೀಗಳ ಸಮಾಜ ಸೇವೆ ಅನನ್ಯ

**(5ನೇ ಪುಟದಿಂದ)** ಮಾದರಿಯಾಗಿದ್ದಾರೆ ಎಂದರು.

ವಿಧಾನ ಪರಿಷತ್ ಮಾಜಿ ಮುಖ್ಯಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿದರು. ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಚನ್ನಗಿರಿ ಹಿರೇಮಠದ ಡಾ. ಕೇದಾರಲಿಂಗ ಶಿವಶಾಂತ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಜಿ. ಹೆಚ್. ರಾಜಶೇಖರ ಗುಂಡಗಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಸಿದ್ಧಗಂಗಾ ಕ್ಷೇತ್ರದ ಹಳೆಯ ವಿದ್ಯಾರ್ಥಿ ಮ.ಚಿ. ಕೃಷ್ಣ, ಶ್ರೀ ವೀರೇಶ್ವರ ಪುಣ್ಯಾಶ್ರಮದ ಗೌರವ ಕಾರ್ಯದರ್ಶಿ ಎ. ಹೆಚ್. ಶಿವಮೂರ್ತಿಸ್ವಾಮಿ, ಸಿದ್ಧಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೋಜ, ಡಿಆರ್‌ಎಂ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಶಕುಂತಲಾ ಗುರುಸಿದ್ಧಯ್ಯ, ಸ್ಫೂರ್ತಿ ಪ್ರಕಾಶನದ ಅಧ್ಯಕ್ಷ ಎಂ. ಬಸವರಾಜ್, ಸತ್ಯಭಾಮ ಮಂಜುನಾಥ್, ಕೊಂಡಜ್ಜಿ ಆರ್. ಉಮೇಶ್, ತ್ಯಾವಣಗಿ ಕೆ.ಎಂ. ಮಲ್ಲಿಕಾರ್ಜುನ್, ಬಾತಿ ವೀರೇಶ್, ಶಿವಮೂರ್ತಿ ಉಪಸ್ಥಿತರಿದ್ದರು.

ಸಂಗೀತ ರಾಘವೇಂದ್ರ ಪ್ರಾರ್ಥಿಸಿದರು. ಕೊಟ್ರೇಶ್ ಉತ್ತಂಗಿ ಸ್ವಾಗತಿಸಿದರು. ಶಿವಯೋಗಿ ಹಿರೇಮಠ ನಿರ್ವಹಿಸಿದರು. ಕೆ.ಎಸ್. ವೀರಭದ್ರಪ್ಪ ತೆಲಿಗಿ, ಗಂಗಾಧರ್ ಬಿ.ಎಲ್. ನಿಟ್ಟೂರು ನಿರೂಪಿಸಿದರು. ಅಣಬೇರು ಕೆ.ಪಿ. ತಾರೇಶ್ ವಂದಿಸಿದರು.

# ಇನ್ನರ್ ವ್ಹೀಲ್ ಕ್ಲಬ್‌ನಿಂದ ವ್ಹೀಲ್ ಚೇರ್ ಕೊಡುಗೆ



ದಾವಣಗೆರೆ, ಜೂ. 19 - ವಿದ್ಯಾನಗರದ ಇನ್ನರ್ ವ್ಹೀಲ್ ಕ್ಲಬ್ ವತಿಯಿಂದ ವಿನಾಯಕ ಮೆಡಿಕಲ್ಸ್ ಸಹಯೋಗದಿಂದ ಅಂಗ ನ್ಯೂನತೆಯುಳ್ಳ ಬಾಲಕ ಆಕಾಶ್‌ನಿಗೆ ವ್ಹೀಲ್ ಚೇರ್ ಅನ್ನು ಕೊಡುಗೆಯಾಗಿ ನೀಡಲಾಯಿತು. ವಿದ್ಯಾನಗರದ ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷರಾದ ಶ್ರೀಮತಿ ಗಿರಿಜಾ ಬಿಲ್ಲಳ್ಳಿ, ಕಾರ್ಯದರ್ಶಿ ಶ್ರೀಮತಿ ರತ್ನಾ ಪಾಟೀಲ್, ವಿದ್ಯಾನಗರದ ರೋಟರಿ ಸಹ ಕಾರ್ಯದರ್ಶಿ ವಿದ್ಯಾನಗರ ರವಿಕುಮಾರ್ ಎ.ಜೆ. ಹಾಗೂ ಇತರೆ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹರಿಹರದ ಹರಿಹರೇಶ್ವರ ದೇವಸ್ಥಾನದಲ್ಲಿ ಯೋಗ ದಿನಾಚರಣೆ

ದಾವಣಗೆರೆ, ಜೂ. 19- ನಾಡಿದ್ದು ದಿನಾಂಕ 21ರಂದು ಬೆಳಿಗ್ಗೆ 5.30ಕ್ಕೆ ಪಾರಂಪರಿಕ ಸ್ಥಳವಾದ ಸಂತೆಬೆನ್ನೂರು ಪುಷ್ಕರಣಿ ಆವರಣದಲ್ಲಿ ಜಿಲ್ಲಾ ಮಟ್ಟದ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಜಿಲ್ಲಾಡಳಿತ ಮತ್ತು ಜಿಲ್ಲಾ ಆಯುಷ್ ಇಲಾಖೆ ಜೊತೆಗೂಡಿ ದೊಡ್ಡಬಾತಿಯ ತಪೋವನ ಯೋಗ - ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಮಹಾವಿದ್ಯಾಲಯ - ಆಸ್ಪತ್ರೆ ಕೂಡ ಯೋಗ ಕಾರ್ಯಕ್ರಮಕ್ಕೆ ಸಹಕಾರ ನೀಡುತ್ತಿದೆ.

ಅದೇ ದಿನದಂದು ಹರಿಹರ ನಗರದ ಶ್ರೀ ಹರಿಹರೇಶ್ವರ ದೇವಸ್ಥಾನದ ಆವರಣದಲ್ಲಿ ಯೋಗ ದಿನಾಚರಣೆ ವಕಾರ್ಯಕ್ರಮ ಜರುಗಲಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ. ಶಂಕರ್‌ಗೌಡ ತಿಳಿಸಿದ್ದಾರೆ.

# ಬಿಳಿಚೋಡು ಗ್ರಾಮದಲ್ಲಿ ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ದಾವಣಗೆರೆ ರೋಟರಿ ಕ್ಲಬ್, ಇನ್ನರ್‌ವ್ಹೀಲ್ ಕ್ಲಬ್, ರೋಟರ್‍ಯಾಕ್ಟ್ ಕ್ಲಬ್ ಇವರುಗಳ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವು ಜಗಳೂರು ತಾಲ್ಲೂಕಿನ ಬಿಳಿಚೋಡು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರವರೆಗೆ ನಡೆಯಲಿದೆ.

ದಾವಣಗೆರೆಯ ಸುಕ್ಷೇಮ ಆಸ್ಪತ್ರೆಯ ಡಾ. ಸುನಿಲ್ ಬ್ಯಾಡಗಿ ಮತ್ತು ವೈದ್ಯ ತಂಡ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶೆಟ್ರು ಕಲಿವೀರಪ್ಪ ಮತ್ತು ಚನ್ನಬಸಮ್ಮ ಮನೋಲಿ ಚಾರಿಟೇಬಲ್ ಟ್ರಸ್ಟ್ (ಬಿಳಿಚೋಡು) ಇವರ ಸಹಯೋಗದೊಂದಿಗೆ ಈ ಶಿಬಿರ ಏರ್ಪಾಡಾಗಿದೆ.

ಡಾ. ಶೋಭ ಧನಂಜಯ, ಡಾ. ಆರ್. ಚೈತಾಲಿ ಮತ್ತು ವೈದ್ಯರ ತಂಡ, ಸ್ತ್ರೀ ಮತ್ತು ಮಕ್ಕಳಿಗೆ ಚಿಕಿತ್ಸೆ ಮತ್ತು ಸಲಹೆ ನೀಡಲಿದೆ.

# ಹಿಂಸಾಚಾರ : ಸಂಸ್ಥೆಗಳ ಕೈವಾಡ

**(5ನೇ ಪುಟದಿಂದ)** ಅಕಾಡೆಮಿಗಳಲ್ಲಿ ಕೆಲವು ಪ್ರಚೋದನಕಾರಿ ಮಾಹಿತಿ ಹರಡಿದ್ದವು. ಪೆಟ್ರೋಲ್ ಕ್ಯಾನ್‌ನೊಂದಿಗೆ ಬಂದು ರೈಲ್ವೆ ನಿಲ್ದಾಣದಲ್ಲಿ ಸೇರುವಂತೆ ಜನರಿಗೆ ಸೂಚನೆ ನೀಡಲಾಗಿತ್ತು. ಅಕಾಡೆಮಿಗಳು ದೊಡ್ಡ ಪ್ರಮಾಣದ ಸಂಚಿನಲ್ಲಿ ಭಾಗಿಯಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

# ಕ್ರೀಡಾ ವಲಯಕ್ಕೆ ಬರಲು ಅಡ್ಡಿ

**(5ನೇ ಪುಟದಿಂದ)** ಕರ್ನಾಟಕ ಕ್ರಿಕೆಟ್‌ನಲ್ಲಿ ಎಲ್ಲಾ ವಯೋಮಾನದ ಕ್ರೀಡಾಪಟುಗಳಿಗೆ ಮಹಿಳಾ ಸಹಾಯಕ ಸಿಬ್ಬಂದಿ ಇರುತ್ತಾರೆ. ಸುರಕ್ಷಿತ ವಾತಾರವಣ ಇದ್ದರೆ ಮಾತ್ರ ಹೆಚ್ಚು ಮಹಿಳೆಯರು ಕ್ರೀಡೆಗೆ ಬರುತ್ತಾರೆ. ಮಹಿಳೆಯರು ತರಬೇತಿ ವಲಯಕ್ಕೆ ಬರಲೂ ಸಹ ಇದು ನೆರವಾಗಲಿದೆ ಎಂದವರು ತಿಳಿಸಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ ಸಹಾಯಕ ಸಿಬ್ಬಂದಿ ಸಂಪೂರ್ಣ ಮಹಿಳೆಯರದ್ದಾಗಲಿ ಎಂಬ ನಿರೀಕ್ಷೆ ಇದೆ. ಮುಖ್ಯ ತರಬೇತಿದಾರರು ಪುರುಷರಾಗಿದ್ದರೂ ಸಹ, ಉಳಿದ ಸಿಬ್ಬಂದಿ ಮಹಿಳೆಯರಾಗಿರಬೇಕು ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

# ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಮಾನಸಿಕ ಮತ್ತು ದೈಹಿಕ ಒತ್ತಡಗಳ ನಿವಾರಣೆಗಾಗಿ, ಸಂಭ್ರಮದಿಂದ ಬದುಕಲು ಹಾಗೂ ಧ್ಯಾನ ಜೀವನ ನಡೆಸಲು ಇಂದಿನಿಂದ ಇದೇ ದಿನಾಂಕ 26 ರವರೆಗೆ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಓಶೋ ಡೈನಾಮಿಕ್ ಧ್ಯಾನ ಶಿಬಿರ ನಡೆಯಲಿದೆ ಎಂದು ಅರ್ಚನಾ (9738572318), ಪುಷ್ಪ (9036719573) ತಿಳಿಸಿದ್ದಾರೆ.

# ಸಂತೆಬೆನ್ನೂರಿನಲ್ಲಿ ಯೋಗ ದಿನಾಚರಣೆ

ದಾವಣಗೆರೆ, ಜೂ.19- ನಾಡಿದ್ದು ದಿನಾಂಕ 21 ರಂದು ಬೆಳಿಗ್ಗೆ 5.30ಕ್ಕೆ ಸಂತೆಬೆನ್ನೂರಿನ ಪುಷ್ಕರಣೆ ಆವರಣದಲ್ಲಿ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಯೋಗ ಸಂಸ್ಥೆಗಳು, ವಿವಿಧ ಸಂಘಟನೆಗಳು ಮತ್ತು ಸರ್ಕಾರಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿರುವ ಈ ಯೋಗ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ ಉದ್ಘಾಟಿಸುವರು. ಶಾಸಕ ಕೆ.ಮಾಡಾಳ್ ವಿರೂಪಾಕ್ಷಪ್ಪ ಅಧ್ಯಕ್ಷತೆ ವಹಿಸುವರು.

# ರಾಜ್ಯಕ್ಕೆ ಇಂದು ಪ್ರಧಾನಿ ಮೋದಿ ಆಗಮನ

**(5ನೇ ಪುಟದಿಂದ)** ಯೋಗ ಪ್ರದರ್ಶನ ನಡೆಯಲಿದೆ. ಸೂರ್ಯ ಪೂರ್ವದಿಂದ ಪಶ್ಚಿಮಕ್ಕೆ ಚಲಿಸುತ್ತಿರುವಂತೆಯೇ, ಒಂದಾದ ನಂತರ ಒಂದು ದೇಶದಲ್ಲಿ ಯೋಗ ಕಾರ್ಯಕ್ರಮಗಳು ಆರಂಭವಾಗಲಿವೆ. 'ಒಂದು ಸೂರ್ಯ, ಒಂದು ಭೂಮಿ' ಪರಿಕಲ್ಪನೆಯಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಯೋಗ ಕಾರ್ಯಕ್ರಮ ನೆರವೇರಲಿದೆ ಎಂದು ಪ್ರಧಾನ ಮಂತ್ರಿ ಕಚೇರಿ ತಿಳಿಸಿದೆ.

2015ರಿಂದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂನ್ 21ರಂದು ಆಚರಿಸಲಾಗುತ್ತಿದೆ. 'ಮಾನವೀಯತೆಗಾಗಿ ಯೋಗ' ಎಂಬುದು ಈ ವರ್ಷದ ಘೋಷ ವಾಕ್ಯವಾಗಿದೆ. ಕೊರೊನಾ ಸಂದರ್ಭದಲ್ಲಿ ಯೋಗ ಯಾವ ರೀತಿಯಲ್ಲಿ ನೆರವಾಯಿತು ಎಂಬುದನ್ನು ಈ ಸಂದರ್ಭದಲ್ಲಿ ಬಿಂಬಿಸಲಾಗುವುದು.

ಬೆಂಗಳೂರಿನ ಐ.ಐ.ಎಸ್.ಸಿ.ಯಲ್ಲಿ ಸೆಂಟರ್ ಫಾರ್ ಬ್ರೇನ್ ರೀಸರ್ಚ್ ತಾಣವನ್ನು ಪ್ರಧಾನಿ ಸೋಮವಾರ ಉದ್ಘಾಟಿಸಲಿದ್ದಾರೆ.

ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಸ್ಥಾಪಿಸಲಾಗಿರುವ ನೂತನ ಬಿ.ಎ.ಎಸ್.ಇ. ವಿಶ್ವವಿದ್ಯಾನಿಲಯದ ಕ್ಯಾಂಪಸ್ ಹಾಗೂ ಸಂವಿಧಾನ ಶಿಲ್ಪಿಯ ಪ್ರತಿಮೆಯನ್ನು ಉದ್ಘಾಟಿಸಲಿದ್ದಾರೆ.

ಇದೇ ವೇಳೆ ಅವರು 150 ತಾಂತ್ರಿಕ ಹಬ್‌ಗಳನ್ನೂ ಉದ್ಘಾಟಿಸಲಿದ್ದಾರೆ. ಕೈಗಾರಿಕೆಗಳ ರೂಪಾಂತರಣಕ್ಕಾಗಿ ಈ ಹಬ್‌ಗಳನ್ನು ರೂಪಿಸಲಾಗಿದೆ. 27 ಸಾವಿರ ಕೋಟಿ ರೂ.ಗಳ ರೈಲು ಹಾಗೂ ರಸ್ತೆ ಯೋಜನೆಗಳಿಗೂ ಪ್ರಧಾನಿ ಶಿಲಾನ್ಯಾಸ ನೆರವೇರಿಸಲಿದ್ದಾರೆ.

ನಂತರ ಮೈಸೂರಿಗೆ ತೆರಳಲಿರುವ ಅವರು, ಮಹಾರಾಜ ಕಾಲೇಜಿನಲ್ಲಿ ಆಯೋಜಿಸಲಾಗಿರುವ ಸಾರ್ವಜನಿಕ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ನಾಗನಹಳ್ಳಿ ರೈಲ್ವೆ ನಿಲ್ದಾಣದಲ್ಲಿ ಕೋಚಿಂಗ್ ಟರ್ಮಿನಲ್‌ಗೆ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಸುತ್ತೂರು ಮಠ ಹಾಗೂ ಚಾಮುಂಡೇಶ್ವರಿ ದೇವಾಲಯಗಳಿಗೂ ಅವರು ಭೇಟಿ ನೀಡಲಿದ್ದಾರೆ.

ಮಂಗಳವಾರ ಪ್ರಧಾನಿ ಮೈಸೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿರುವ ಬೃಹತ್ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದಾರೆ.

ಬೆಂಗಳೂರು ನಗರ ರೈಲ್ವೆ ಯೋಜನೆಗೂ ಅವರು ಶಿಲಾನ್ಯಾಸ ನೆರವೇರಿಸಲಿದ್ದಾರೆ. ಇದು ಬೆಂಗಳೂರು ನಗರದ ಹೊರ ವಲಯ ಹಾಗೂ ಹೊರ ನಗರಗಳನ್ನು ಸಂಪರ್ಕಿಸಲಿದೆ.


WANTED

Female Accountant - 3 No.s

Contact

Samyak Ceramics

Hadadi Road, Near Uday Super Bazar, Davangere

Mobile : 94486 58255


# ಮುಗಿಯದ ಉಕ್ರೇನ್ ಸಮರ

**(5ನೇ ಪುಟದಿಂದ)** ತಿರಸ್ಕರಿಸಿರುವ ಹಾಗೂ ಅಧಿಕಾರಿಗಳು ಮತ್ತು ಅವರ ತುಕಡಿಗಳ ನಡುವೆ ಸಂಘರ್ಷದ ಘಟನೆಗಳು ಮುಂದುವರೆಯುತ್ತಿವೆ.

ಮತ್ತೊಂದೆಡೆ ಹೇಳಿಕೆ ನೀಡಿರುವ ನ್ಯಾಟೋ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್‌ಬರ್ಗ್, ಎಷ್ಟು ದೀರ್ಘ ಕಾಲ ಯುದ್ಧ ಮುಂದುವರೆಯುತ್ತದೆ ಎಂದು ಹೇಳಲಾಗದು. ನಾವು ವರ್ಷಗಳ ಯುದ್ಧಕ್ಕೆ ಸಿದ್ಧವಾಗಿರಬೇಕಿದೆ ಎಂದಿದ್ದಾರೆ.

ಉಕ್ರೇನ್‌ಗೆ ನೀಡುತ್ತಿರುವ ಬೆಂಬಲ ತಗ್ಗಿಸಬಾರದು. ವೆಚ್ಚ ಎಷ್ಟೇ ಹೆಚ್ಚಾದರೂ ಸೈನಿಕ ಬೆಂಬಲದ ಜೊತೆಗೆ ಇಂಧನ ಹಾಗೂ ಆಹಾರದ ಬೆಂಬಲ ಮುಂದುವ ರೆಸಬೇಕು ಎಂದವರು ಹೇಳಿದ್ದಾರೆ.

# ನವೆಂಬರ್ : ಸಿಬ್ಬಂದಿಗೆ ತರಬೇತಿ

**(5ನೇ ಪುಟದಿಂದ)** 25 ಸಾವಿರ ಸಿಬ್ಬಂದಿಗೆ ಡಿಸೆಂಬರ್‌ನಲ್ಲಿ ತರಬೇತಿ ಆರಂಭಿಸಲಾಗುವುದು. ಎರಡನೇ ತಂಡ ಡಿಸೆಂಬರ್ 23ರ ವೇಳೆಗೆ ತರಬೇತಿಗೆ ಸೇರ್ಪಡೆಯಾಗಲಿದೆ. ಒಟ್ಟಾರೆ 83 ನೇಮಕಾತಿ ಸಮಾವೇಶಗಳ ಮೂಲಕ 40 ಸಾವಿರ ಸಿಬ್ಬಂದಿ ನೇಮಕವಾಗಲಿದೆ ಎಂದವರು ಹೇಳಿದ್ದಾರೆ.

# ಅನುವಂಶೀಯ ಆಪ್ತ ಸಮಾಲೋಚನಾ ಶಿಬಿರ

ಕರ್ನಾಟಕ ಹಿಮೋಫಿಲಿಯಾ ಸಂಸ್ಥೆ ವತಿಯಿಂದ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಸಂಸ್ಥೆಯ ಸಭಾಂಗಣದಲ್ಲಿ ಅನುವಂಶಿಯ ಆಪ್ತ ಸಮಾಲೋಚನಾ (ಜಿನೆಟಿಕ್ ಕೌನ್ಸೆಲಿಂಗ್) ಶಿಬಿರ ನಡೆಯಲಿದೆ.

ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಉಪ ಕುಲಪತಿಗಳೂ, ಅನುವಂಶೀಯ ವಿಭಾಗದ ಮುಖ್ಯಸ್ಥರಾದ ಡಾ. ಗಾಯ್, ವಿಐಟಿ ಯೂನಿರ್ವಸಿಟಿ ವೆಲ್ಲೂರಿನ ಹಿರಿಯ ಮನೋವೈದ್ಯರಾದ ಪೂಜಾ ಆರ್. ರಾಯ್‌ಸಮ್ ಶಿಬಿರ ನಡೆಸಿ ಕೊಡಲಿದ್ದಾರೆ. ಶಿಬಿರದಲ್ಲಿ 20 ರಿಂದ 25 ಹಿಮೋಫಿಲಿಯಾ ಮತ್ತು ಇತರೆ ವಿರಳ ಅನುವಂಶೀಯತೆಯ ರೋಗಿಗಳು, ಅವರ ಕುಟುಂಬದವರು ಭಾಗವಹಿಸಲಿದ್ದಾರೆ. ವಿವರಕ್ಕೆ ಮಹಾಂತೇಶ್ (8660516038), ಅನಿತಾ ನಟರಾಜ್ (7975605247) ಅವರನ್ನು ಸಂಪರ್ಕಿಸುವಂತೆ ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ ತಿಳಿಸಿದ್ದಾರೆ.

# ನಾಳೆ 'ವಿಶ್ವ ಯೋಗ ಸಂಕಲ್ಪ ಅಭಿಯಾನ'

ದಾವಣಗೆರೆ, ಜೂ. 19- ನಾಡಿದ್ದು ದಿನಾಂಕ 21 ರಂದು ಬೆಳಿಗ್ಗೆ 6 ರಿಂದ 8 ರವರೆಗೆ ನಗರದ ಡಾ.ಎಂ.ಸಿ. ಮೋದಿ ರಸ್ತೆಯಲ್ಲಿ ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ನೇತೃತ್ವದಲ್ಲಿ ವಿಶ್ವ ಯೋಗ ಸಂಕಲ್ಪ ಅಭಿಯಾನ ಎಂಬ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಾಮೂಹಿಕ ಯೋಗ, ಸಾತ್ವಿಕ ಆಹಾರ ಮತ್ತು ಮಾನಸಿಕ ನೆಮ್ಮದಿ ಕುರಿತು ಈ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಸನ್ನಕುಮಾರ್ ಮನವಿ ಮಾಡಿದ್ದಾರೆ.

# ಕ್ಷತ್ರಿಯ ಮರಾಠ ಸಮಾಜದ ವಿದ್ಯಾರ್ಥಿಗಳಿಗೆ ಪುರಸ್ಕಾರ

ದಾವಣಗೆರೆ, ಜೂ.19- ಕ್ಷತ್ರಿಯ ಮರಾಠ ವಿದ್ಯಾ ಮತ್ತು ಕಲ್ಯಾಣಾಭಿವೃದ್ಧಿ ಟ್ರಸ್ಟ್ ವತಿಯಿಂದ ನಗರದ ಕ್ಷತ್ರಿಯ ಮರಾಠ ಸಮಾಜದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಹಿರಿಯ ಮುಖಂಡ ಯಶವಂತ ರಾವ್ ಜಾಧವ್ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ. 75ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಪುರಸ್ಕಾರಕ್ಕೆ ಅರ್ಹರಾಗಿದ್ದಾರೆ. ಶೇ. 90 ರಷ್ಟು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಬರುವ ಜುಲೈ 5ರೊಳಗೆ ಅರ್ಜಿ ಸಲ್ಲಿಸಬಹುದು.

ವಿವರಕ್ಕೆ ಯಶವಂತರಾವ್ ಜಾಧವ್ (94480-05060), ಶ್ರೀಮತಿ ಗೌರ ಬಾಯಿ ಮೋಹಿತೆ (99160-09666), ತಿಪ್ಪೇಶರಾವ್ ಚವ್ಹಾಣ್ (94486-55851), ಜಿ.ಎಂ. ಪರಶುರಾಮ್ ರಾವ್ ಸಾಳಂಕೆ (94483-09883), ತಾನೋಜಿರಾವ್ ಸಿಂಧೆ (98800-64641), ಅಣ್ಣೋಜಿರಾವ್ ಸಿಂಧೆ (99022-17797) ಅವರನ್ನು ಸಂಪರ್ಕಿಸಬಹುದು.


26ನೇ ವರ್ಷದ ಪುಣ್ಯಸ್ಮರಣೆ



ನಟರಾಜಯ್ಯ ಡಿ.ಜೆ.

(ನಿಧನ 20.06.1996)

ನೀವು ನಮ್ಮನ್ನಗಲಿ ಇಂದಿಗೆ 26 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತ್ನಿ : ಭಾಗ್ಯ ಜಿ.ಎಂ.

ಮಗ: ರಿತೀಶ್ ಕುಮಾರ್ ಡಿ.ಎನ್.

ಶ್ರೀಮತಿ ಅಶ್ವಿನಿ ರಿತೀಶ್

ಹಾಗೂ ಬಂಧು-ಮಿತ್ರರು.

ಐದನೇ ವರ್ಷದ ಪುಣ್ಯಸ್ಮರಣೆ



ದಿ. ಬಳಗನೂರು ರಾಮನಗೌಡ್ರು

ಅಕ್ಕಿ ವರ್ತಕರು, ದಾವಣಗೆರೆ.

ನೀವು ನಮ್ಮನ್ನಗಲಿ ಐದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶ್ರೀಮತಿ ಕಸ್ತೂರಮ್ಮ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು

ಶ್ರೀ ಅಮರೇಶ್ವರ ಟ್ರೇಡಿಂಗ್ ಕಂಪನಿ, ಅಮರೇಶ್ವರ ಅಂಡ್ ಕೋ

ಎಪಿಎಂಸಿ, ನೀರುಳ್ಳಿ ಮಾರ್ಕೆಟ್ ಹತ್ತಿರ, ದಾವಣಗೆರೆ ಹಾಗೂ ಬಂಧು-ಮಿತ್ರರು.


# ದಿನ ದಿನಕ್ಕೂ ಹೆಚ್ಚುತ್ತಿರುವ ಅಡಿಕೆ ಬೆಲೆ



ದಾವಣಗೆರೆ, ಜೂ.19- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ (ದಾವಣಗೆರೆ) ಹಾಗೂ ಹಿರೇಕೋಗಲೂರು ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ಸಂಯುಕ್ತಾಶ್ರಯದಲ್ಲಿ ಪ್ರಧಾನ ತರಬೇತಿ ಕಾರ್ಯಕ್ರಮವನ್ನು ಕೋಗಲೂರು ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಹಿರೇಕೋಗಲೂರು ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ಕಚೇರಿಯ ಉದ್ಘಾಟನೆ ನೆರವೇರಿಸಲಾಯಿತು.

ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಎಂ.ಜಿ. ಬಸವನಗೌಡ ಮಾತನಾಡಿ, ಅಡಿಕೆ ಬೆಲೆ ದಿನದಿಂದ ದಿನಕ್ಕೆ ಹೆಚ್ಚಾಗು ತ್ತಿದ್ದು, ಅದೇ ರೀತಿ ಅಡಿಕೆಗೆ ಬರುವ ಕೀಟ ಮತ್ತು ರೋಗಗಳ ಬಾಧೆ ಸಹ ಹೆಚ್ಚಾಗುತ್ತಿದೆ. ಸಮರ್ಪಕವಾದ ನೀರು ನಿರ್ವಹಣೆ ಹಾಗೂ ಪೋಷಕಾಂಶಗಳ ನಿರ್ವಹಣೆ ಕೈಗೊಂಡರೆ ಅಡಿಕೆ ಇಳುವರಿ ಯನ್ನು ಹೆಚ್ಚಿಸಬಹುದು ಎಂದರು.

ಬೇಸಾಯ ತಜ್ಞ ಮಲ್ಲಿಕಾರ್ಜುನ ಬಿ.ಓ. ಮಾತನಾಡಿ, ರೈತ ಉತ್ಪಾದಕ ಕಂಪನಿಗಳು ಲಾಭವನ್ನು ರೈತರು ಉಪಯೋಗಿಸಿಕೊಂಡು, ಮೌಲ್ಯವರ್ಧನೆ ಕಡೆ ಹೆಚ್ಚು ಗಮನ ಹರಿಸಿದರೆ ಆದಾಯವನ್ನು ದ್ವಿಗುಣ ಮಾಡಬಹುದು ಎಂದರು.

ಕಂಪನಿಯ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ಕೃಷಿ ಇಲಾಖೆಯಿಂದ ಸಿಗುವ ಸೌಲಭ್ಯಗಳನ್ನು ನಮ್ಮ ಕಂಪನಿಯ ಮುಖಾಂತರ ಷೇರುದಾರರಿಗೆ ಸಿಗುವಂತೆ ಮಾಡಬೇಕು ಎಂದರು. ಪ್ರಗತಿಪರ ರೈತರೂ ಆದ ಉಪಾಧ್ಯಕ್ಷ ಜಗದೀಶ್ ಮತ್ತು ಇತರರು ಭಾಗವಹಿಸಿದ್ದರು.

# ಮನುಷ್ಯನ ದುರಾಸೆಗೆ ಪರಿಸರ ಹಾಳು



**(5ನೇ ಪುಟದಿಂದ)** ಇರಲು ಸಾಧ್ಯವಿಲ್ಲ ವಾಯು ವಿಷವಾಗುತ್ತಿದೆ. ಶಬ್ದಮಾಲಿನ್ಯ ಅತಿಯಾಗಿ ಶಬ್ದ ಮನುಷ್ಯನ ಮಾನಸಿಕ ನೆಮ್ಮದಿಯನ್ನು ಹಾಳುಮಾಡುತ್ತಿದೆ, ವಾಹನ ದಟ್ಟಣೆ, ಕೈಗಾರಿಕೆ, ಯಂತ್ರಗಳು , ಧ್ವನಿವರ್ಧಕಗಳು ಶಬ್ದಮಾಲಿನ್ಯಕ್ಕೆ ಮೂಲ ಕಾರಣಗಳು. ಇಂದು ಮಧುಮೇಹ, ರಕ್ತದೊತ್ತಡದಂತ ಕಾಯಿಲೆಗಳು ಹೆಚ್ಚಾಗುತ್ತಿವೆ. ಇದಕ್ಕೆ ನಮ್ಮ ಜೀವನ ಶೈಲಿ ಆಹಾರ ಕ್ರಮಗಳ ಜೊತೆಗೆ ಅತಿಯಾದ ಶಬ್ದವೂ ಕಾರಣವಾಗುತ್ತದೆ ಎಂದು ವಿಶ್ಲೇಷಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಹಿರಿಯ ಮುಖಂಡ ಆರ್. ಲೋಕೇಶ್, ಪುರಸಭೆ ಸದಸ್ಯರಾದ ಡಿ. ರೊಕ್ಕಪ್ಪ, ಎಸ್.ಕೆ. ಜಾವೀದ್, ವಿನಯ್ ಕುಮಾರ್, ಅಸ್ಲಾಂ, ಹನುಮಂತಪ್ಪ, ವಾಗೇಶ್,ಕಿರಣ್ ಶ್ಯಾನಭೋಗ, ಹೊನ್ನಪ್ಪ, ರಾಹುಲ್, ನಾಗರಾಜ್, ಭರಮಪ್ಪ ಮತ್ತಿತರರಿದ್ದರು.

# ಕೃಷಿಕನ ಮದುವೆ ಸಂಭ್ರಮಕ್ಕೆ ಸಾಕ್ಷಿಯಾದ ಜೋಡೆತ್ತುಗಳು



ದಾವಣಗೆರೆ, ಜೂ.19- ಗೃಹ ಪ್ರವೇಶ ಹಾಗೂ ಕೆಲ ಶುಭ ಸಮಾರಂಭಗಳಿಗೆ ಶುಭವಾಗಲೆಂದು ಆಕಳು, ಎತ್ತುಗಳ ಕರೆತಂದು ಪೂಜಿಸುವುದು ಸಾಮಾನ್ಯ. ಆದರೆ, ಶಾಮನೂರಿನ ಯುವ ಕೃಷಿಕರೋರ್ವರ ಮದುವೆ ಸಂಭ್ರಮಕ್ಕೆ ಆತನಿಗೆ ಪಂಚಪ್ರಾಣವಾಗಿರುವ ಜೋಡೆತ್ತುಗಳಿಗೆ ಮೊದಲು ಪೂಜಿಸಿ ತಮ್ಮ ಮದುವೆಯ ಕಾರ್ಯಾರಂಭಿಸಿ ಶ್ರೇಷ್ಠತೆ ಮೆರೆದಿದ್ದಾರೆ.

ಶಾಮನೂರಿನ ಬಿಂದಪ್ಪ ಲಲಿತಮ್ಮ ಮತ್ತು ಲಿಂ. ಬಿ. ಲಿಂಗರಾಜ್ ಅವರ ಸುಪುತ್ರ ಬಿ.ಎಲ್. ಮಂಜುನಾಥ್ ಅವರು ಕಕ್ಕರಗೊಳ್ಳ ಗ್ರಾಮದ ವಿಶಾಲ ಮತ್ತು ಕೆ. ಪಂಚಪ್ಪ ಅವರ ಪುತ್ರಿ ಕೆ.ಪಿ. ಪೂಜಾ ಅವರನ್ನು ವರಿಸಿದ್ದು, ತಮ್ಮ ವಿವಾಹ ಮಹೋತ್ಸವದಲ್ಲಿ ಬದುಕಿನ ಭಾಗವಾಗಿರುವ ಜೋಡೆತ್ತುಗಳಿಗೂ ಗೌರವಾದರ ನೀಡಿದ್ದು ವಿಶೇಷ.

ನಿನ್ನೆ ಸಂಜೆ ಎಸ್.ಎಸ್. ಕನ್‌ವೆನ್ಷನ್ ಹಾಲ್‌ನಲ್ಲಿ ಮದುವೆ ಸಮಾರಂಭದಲ್ಲಿ ಜೋಡೆತ್ತುಗಳನ್ನು ತಂದು ಮೊದಲಿಗೆ ಅವುಗಳಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಮದುವೆ ಮಂಟಪ ಪ್ರವೇಶಿಸಿ ಮದುವೆಯ ಕಾರ್ಯಾರಂಭಕ್ಕೆ ಹೆಜ್ಜೆ ಹಾಕಿದರು. ಅರಸೀಕೆರೆ ಜಾತ್ರೆಯಲ್ಲಿ ಖರೀದಿಸಿದ್ದ ಜೋಡೆತ್ತುಗಳಿಗೂ ಸಹ ವಿಶೇಷ ಅಲಂಕಾರ ಮಾಡಿ ಕಂಗೊಳಿಸುವಂತೆ ಮಾಡಿದ್ದಲ್ಲದೇ, ಅವುಗಳಿಗಾಗಿ ಮದುವೆ ಮಂಟಪದ ಆವರಣದಲ್ಲಿ ಸುರಕ್ಷಿತವಾಗಿ ವಿಶೇಷ ಅಲಂಕೃತ ವೇದಿಕೆ ಸಿದ್ಧಪಡಿಸಲಾಗಿತ್ತು.

ವರ ಮಂಜುನಾಥ್ ಅವರು ಪದವಿ ಪಡೆದರೂ ಸಹ ಯಾವುದೇ ಸರ್ಕಾರಿ, ಖಾಸಗಿ ಉದ್ಯೋಗ ಬಯಸದೇ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಭವಿಷ್ಯಕ್ಕೆ ದಾರಿ ಕಂಡುಕೊಂಡಿದ್ದಾರೆ. ಪ್ರಸ್ತುತ ತಾಂತ್ರಿಕ ಯುಗದಲ್ಲಿ ಯಂತ್ರೋಪಕರಣಗಳ ಅಬ್ಬರದಲ್ಲಿ ಗ್ರಾಮೀಣ ಭಾಗದಲ್ಲಿ ಅಳಿವಿನಂಚಿನಲ್ಲಿರುವ ಕರ್ನಾಟಕದ ಸಾಂಪ್ರದಾಯಿಕ ದೇಶಿ ಎತ್ತುಗಳನ್ನು ಕೃಷಿಯಲ್ಲಿ ಬಳಸುವುದಾಗಲೀ, ಅವುಗಳನ್ನು ಸಾಕುವುದು ಹಾಗೂ ಹೈನುಗಾರಿಕೆ ಮಾಡಬೇಕೆಂಬ ಹಂಬಲ ಹಾಗೂ ವಿವಿಧ ದೇಶಿ ಎತ್ತುಗಳು, ಆಕಳುಗಳ ಸಾಕುತ್ತಾ ಬದುಕು ಸವೆಸಬೇಕೆಂಬ ಆಸೆ ಮಂಜುನಾಥ್ ಅವರದ್ದಾಗಿದೆ ಎಂದು ಆತ್ಮೀಯರಾದ ಸಂಪತ್ ಕುಮಾರ್ ಖುಷಿ ಹಂಚಿಕೊಂಡರು.

ಮಂಜುನಾಥ್ ಅವರ ತಂದೆ ಸಹ ಕೃಷಿಕರಾಗಿದ್ದು, ತಂದೆಯಂತೆ ಮಂಜುನಾಥ್ ಕೃಷಿಯನ್ನೇ ಬದುಕಾಗಿಸಿಕೊಂಡಿದ್ದಾರೆ. ತಮ್ಮ 23ನೇ ವಯಸ್ಸಿನ ಕಾಲೇಜು ಹಂತದಿಂದಲೇ ಕೃಷಿಗಿಳಿದಿದ್ದು, ಮೂರುವರೆ ಎಕರೆ ಅಡಿಕೆ ಮತ್ತು ತೆಂಗಿನ ತೋಟದಲ್ಲಿ ಕಾಯಕ ಮಾಡುತ್ತಿದ್ದಾರೆ. ಪ್ರತಿ ವರ್ಷ ಶಾಮನೂರಿನ ಬೆಲ್ಲದ ಜಾತ್ರೆಯ ಎತ್ತುಗಳ ಸ್ಪರ್ಧೆಯಲ್ಲಿ ಈ ಜೋಡೆತ್ತುಗಳನ್ನು ಸ್ಪರ್ಧೆಗಿಳಿಸುತ್ತಿದ್ದು, ಕಳೆದ 5 ವರ್ಷಗಳಿಂದಲೂ ಸ್ಪರ್ಧೆಯಲ್ಲಿ ಬಹುಮಾನ ಸಿಕ್ಕಿದೆ ಎಂದು ಸಂಬಂಧಿಯೋರ್ವರು ತಿಳಿಸಿದರು.

## ಭಾರತ ಸೇವಾದಳ ಜಿಲ್ಲಾ ಸಮಿತಿ ಚುನಾವಣೆ

ಭಾರತ ಸೇವಾದಳ ಜಿಲ್ಲಾ ಸಮಿತಿಯ ಚುನಾವಣೆಯನ್ನು ನಡೆಸಲು ರಾಜ್ಯ/ಜಿಲ್ಲಾ ಚುನಾವಣಾ ಅಧಿಕಾರಿಗಳು ವೇಳಾಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಆಜೀವ ಸದಸ್ಯರಿಂದ 13 ಮಂದಿ ಶಿಕ್ಷಕರ ಕ್ಷೇತ್ರದಿಂದ ಒಬ್ಬ ಶಿಕ್ಷಕ, ಒಬ್ಬ ಶಿಕ್ಷಕಿ ಸೇರಿ 15 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಇದೇ ದಿನಾಂಕ 23ರ ವರೆಗೆ ನಾಮಪತ್ರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ದಿನಾಂಕ 24ರಂದು ನಾಮಪತ್ರಗಳ ಪರಿಶೀಲನೆ, ದಿನಾಂಕ 25 ರಂದು ನಾಮಪತ್ರಗಳನ್ನು ವಾಪಸ್ ಪಡೆಯಲು ಕೊನೆಯ ದಿನ. ದಿನಾಂಕ 30ರಂದು ಮತದಾನ ನಡೆದು, ಅಂದೇ ಮತ ಎಣಿಕೆ ಕಾರ್ಯ ನಡೆಯಲಿದೆ.

## ಭಾವಸಾರ ಕ್ಷತ್ರೀಯ ಹಾಸ್ಟೆಲ್ ಪ್ರವೇಶ ಆರಂಭ

ದಾವಣಗೆರೆ, ಜೂ.19- ನಗರದ ಭಾವಸಾರ ಕ್ಷತ್ರೀಯ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿ ನಿಲಯ ಆರಂಭವಾಗಿದೆ. ಶೀಘ್ರದಲ್ಲಿ ಊಟದ ವ್ಯವಸ್ಥೆ ಮಾಡಲಾಗುವುದು. ವಿವರಕ್ಕೆ 91647 37989 ನ್ನು ಸಂಪರ್ಕಿಸಬಹುದು.


## ಹೃತ್ಪೂರ್ವಕ ಅಭಿನಂದನೆಗಳು



ಆರ್.ಜಿ. ಪಿ.ಯು. ಕಾಲೇಜಿನ ವಿದ್ಯಾರ್ಥಿನಿ ಹಾಗೂ ಶ್ರೀ ಭವಾನಿ ಜ್ಯೂಯಲರ್ಸ್ ಮಾಲೀಕರಾದ ಶ್ರೀಮತಿ ಎಸ್.ಜಿ. ನೀತಾ ಕೋಂ ಲೇಟ್ ಶ್ರೀಧರ್ ಇವರ ಪುತ್ರಿ


**ರುತುಜ ಎಸ್.ಜಿ.**

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 575 (96%) ಅಂಕ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

- ದಿ. ರಾಮಚಂದ್ರ, ಎಂ.ಬಿ.ಕೇರಿ ಗೆಳೆಯರ ಬಳಗ
- ರಾಜು ಮೇಸ್ತ್ರಿ
- ಪ್ರಕಾಶ್
- ಕಾಶೀನಾಥ್ ಫೋಟೋ ಗ್ರಾಫರ್
- ನಂದಕುಮಾರ್ ಡಗೇ
- ಎಂ.ಬಿ.ಕೇರಿ ಗೆಳೆಯರ ಬಳಗ, ದಾವಣಗೆರೆ

|| ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ||

## ಚಿರಸ್ಮರಣೆ



**ದಿ|| ಆಲದಹಳ್ಳಿ ಗುರುಸಿದ್ದಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ 24 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ ನೀವು ಹಾಕಿಕೊಟ್ಟ ಹಾದಿಯಲ್ಲಿ ಮುನ್ನಡೆಯುತ್ತಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,

ಆಲದಹಳ್ಳಿ ಕೊಟ್ರೇಶಪ್ಪ ಮತ್ತು ಮಕ್ಕಳು
ಆಲದಹಳ್ಳಿ ಸಿದ್ಧರಾಮೇಶ್ವರ ಮತ್ತು ಮಕ್ಕಳು,
ಆಲದಹಳ್ಳಿ ಶಿವಕುಮಾರ ಮತ್ತು ಮಕ್ಕಳು,
ಆಲದಹಳ್ಳಿ ಸವಿತ ಜಗದೀಶ್ ಮತ್ತು ಮಕ್ಕಳು
ನರಸರಾಜಪೇಟೆ, ದಾವಣಗೆರೆ.
ಅಳಿಯಂದಿರು, ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು
ಆಲದಹಳ್ಳಿ ವಂಶಸ್ಥರು, ಬಸಾಪುರ

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 19-6-2022ರಂದು ನಿಧನರಾದ ನಮ್ಮೆಲ್ಲರ ಆತ್ಮೀಯರು, ಹಿರಿಯರು, ಮಾರ್ಗದರ್ಶಕರಾಗಿದ್ದ

**ಶ್ರೀ ನಾಗೇಶ್ ನಾರಾಯಣ್ ರಾಯ್ಕರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಗಳು.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.


- ಕೃಷ್ಣಪ್ಪ ಬಾಳಪ್ಪ ಯಲ್ಲನಕರ್
- ನಲ್ಲೂರು ಅರುಣಾಚಲ ಎನ್ ರೇವಣಕರ್
- ಮಂಜುನಾಥ್ ಬಾಳಪ್ಪ ಯಲ್ಲನಕರ್
- ದತ್ತಾತ್ರೇಯ ಬಾಳಪ್ಪ ಯಲ್ಲನಕರ್

ಹಾಗೂ ಬಂಧು-ಮಿತ್ರರು










## ಬ್ರೂಸ್ ಲೀ ಆಲ್ ಮಾರ್ಷಲ್ ಆರ್ಟ್ಸ್ ಆವಾರ್ಡ್ ಪಡೆದ ಉಮೇಶ್ ಬಾಬು





ದಾವಣಗೆರೆ, ಜೂ.19- ಡಬ್ಲುಎಸ್ ಎಸ್ ಸ್ಪೋರ್ಟ್ಸ್ ಇಂಟರ್ ನ್ಯಾಷನಲ್ ಯುನಿಟ್ಸ್ ಹಾಗೂ ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಸಂಸ್ಥೆಯಿಂದ ನೀಡಲಾಗುವ ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿಯಾದ ಬ್ರೂಸ್ ಲೀ ಆಲ್ ಮಾರ್ಷಲ್ ಆರ್ಟ್ಸ್ ಆವಾರ್ಡ್–2022ಕ್ಕೆ ನಗರದ ಜೆನ್ ಅಕಾಡೆಮಿಯ ಎನ್. ಉಮೇಶ್ ಬಾಬು ಭಾಜನರಾಗಿದ್ದಾರೆ.

ಮಾರ್ಷಲ್ ಆರ್ಟ್ಸ್ ಕ್ಷೇತ್ರದಲ್ಲಿ ಉಮೇಶ್ ಬಾಬು ಅವರ ಸೇವೆಯನ್ನು ಪರಿಗಣಿಸಿ ಬೆಂಗಳೂರಿನಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ಡಬ್ಲುಎಸ್ಎಸ್ ಸ್ಪೋರ್ಟ್ಸ್ ಇಂಟರ್ ನ್ಯಾಷನಲ್ ಯುನಿಟ್ಸ್ ಹಾಗೂ ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಸಂಸ್ಥೆಯು ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದೆ.

ಗ್ಲೋಬಲ್ ವರ್ಲ್ಡ್ ರೆಕಾರ್ಡ್ ನ ಪ್ರಾದೇಶಿಕ ಮಟ್ಟದ ಬ್ರೂಸ್‌ಲೀ ಆಲ್ ಮಾರ್ಷಲ್ ಆರ್ಟ್ಸ್ ಆವಾರ್ಡ್–2022 ಪ್ರಶಸ್ತಿಯನ್ನು ಆನಂದ್ ಜೆ. ನಾರ್ವೇಕರ್ ಪಡೆದುಕೊಂಡಿದ್ದಾರೆ. ಗ್ಲೋಬಲ್ ವರ್ಲ್ಡ್ ರೆಕಾರ್ಡ್‌ನ ಗುಂಪು ಸ್ಪರ್ಧೆಯ ವಿಶ್ವ ದಾಖಲೆಯ ಪ್ರಶಸ್ತಿಗಳನ್ನು ಜೆನ್ ಅಕಾಡೆಮಿ ಸದಸ್ಯರುಗಳಾದ ಪ್ರೀತಂ, ಆನಂದ್, ಅನೂಪ್ ಪಡೆದಿದ್ದಾರೆ.

## ಮಾಗನೂರು ಕಾಲೇಜಿಗೆ ಶೇ. 96

ದಾವಣಗೆರೆ, ಜೂ. 19- ನಗರದ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 96 ರಷ್ಟು ಫಲಿತಾಂಶ ಬಂದಿದೆ.

ಕಾಲೇಜಿನ ವಿದ್ಯಾರ್ಥಿನಿ ಜಿ.ಡಿ. ರಕ್ಷಿತಾ 592 ಅಂಕಗಳನ್ನು ಪಡೆದು ರಾಜ್ಯಕ್ಕೆ 6 ನೇ ರ್‍ಯಾಂಕ್ ಹಾಗೂ ಕಾಲೇಜಿಗೆ ಟಾಪರ್ ಆಗಿದ್ದಾರೆ. 216 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 69 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 116 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 47 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಶೇ. 100 ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ.

ಜಿ.ಡಿ. ರಕ್ಷಿತಾ ಕನ್ನಡ, ಭೌತಶಾಸ್ತ್ರ, ಗಣಿತ, ಜೀವಶಾಸ್ತ್ರ ವಿಷಯಗಳಲ್ಲಿ 100 ಕ್ಕೆ 100 ಅಂಕ ಗಳಿಸಿದ್ದಾರೆ.

ಜೆ.ಕೆ. ಶ್ರೇಯಸ್ 586 ಅಂಕಗಳನ್ನು ಗಳಿಸಿದ್ದು, ಕನ್ನಡ, ರಸಾಯನಶಾಸ್ತ್ರ, ಗಣಿತ ವಿಷಯಗಳಲ್ಲಿ 100 ಕ್ಕೆ 100 ಅಂಕ ಗಳಿಸಿದ್ದಾರೆ.

ಎಸ್.ಹೆಚ್. ಶುಭಶ್ರೀ 583 ಅಂಕಗಳು. ರಸಾಯನಶಾಸ್ತ್ರ, ಗಣಿತ ವಿಷಯಗಳಲ್ಲಿ 100 ಕ್ಕೆ 100 ಅಂಕಗಳು ಬಂದಿವೆ. ಬಿ.ಎಲ್. ಯಶವಂತ್ 581 ಅಂಕಗಳು. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಗಣಕ ವಿಜ್ಞಾನ ವಿಷಯಗಳಲ್ಲಿ 100 ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ. ಉತ್ತಮ ಫಲಿತಾಂಶ ತಂದುಕೊಟ್ಟ ಕಾಲೇಜಿನ ವಿದ್ಯಾರ್ಥಿಗಳಿಗೆ ಕಾಲೇಜಿನ ಕಾರ್ಯದರ್ಶಿ ಸಂಗಮೇಶ್ವರ ಗೌಡ್ರು, ನಿರ್ದೇಶಕ ಡಾ.ಜಿ.ಎನ್.ಹೆಚ್. ಕುಮಾರ್, ಪ್ರಾಚಾರ್ಯ ಡಾ. ಪ್ರಸಾದ್ ಬಂಗೇರ, ಉಪನ್ಯಾಸಕರು, ಸಿಬ್ಬಂದಿ ಅಭಿನಂದಿಸಿದ್ದಾರೆ.

# ಕುರಿಗಾರರಿಗೆ ಉಣ್ಣೆ ನಿಗಮದಿಂದ ವಿಮೆ

## ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ. ಎನ್.ಕೆ. ಸಿದ್ದೇಶ್



ಹರಿಹರ

ಹರಿಹರ, ಜೂ. 19- ಕುರಿಗಾರರು ಆಕಸ್ಮಿಕವಾಗಿ ಮರಣ ಹೊಂದಿದರೆ, ಅವರ ಕುಟುಂಬವನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡುವುದಕ್ಕೆ ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ವಿಮಾ ಸೌಲಭ್ಯಗಳನ್ನು ನೀಡುತ್ತಿದೆ. ಅದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಪಶುಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎನ್.ಕೆ. ಸಿದ್ದೇಶ್ ಹೇಳಿದರು.

ನಗರದ ಹೊರವಲಯದ ಕವಲೆತ್ತು ಗ್ರಾಮದ ಮಾರ್ಗ ದುರ್ಗಾ ದೇವಿ ದೇವಸ್ಥಾನದ ಆವರಣದಲ್ಲಿ ಕುರಿಗಾರರ ಸಭೆಯಲ್ಲಿ ಅವರು ಮಾತನಾಡಿದರು.

ಪ್ರತಿಯೊಬ್ಬ ಕುರಿಗಾರರಿಗೆ ಒಂದು ವರ್ಷಕ್ಕೆ ನ್ಯೂ ಇಂಡಿಯಾ ವಿಮಾ ಕಂಪನಿಯವರು 88.50 ರೂ. ಗಳ ಕಂತು ದರವನ್ನು ನಿಗದಿಪಡಿಸಿದ್ದು ಈ ಹಣವನ್ನು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ ಪೂರ್ಣ ಭರಿಸಲಾಗುವುದು ಎಂದವರು ಹೇಳಿದರು.

ಕುರಿಗಾರರು ಆಕಸ್ಮಿಕವಾಗಿ ಮರಣ ಹೊಂದಿದ್ದರೆ ಅವರ ಕುಟುಂಬಕ್ಕೆ ವಿಮಾ ಮೊತ್ತವನ್ನು ನೀಡಲಾಗುತ್ತದೆ ಎಂದು ಹೇಳಿದರು.

ಕುರಿ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕ ಡಾ. ಸಂತೋಷ ಮಾತನಾಡಿ, ವಲಸೆ ಕುರಿಗಾರರಿಗೆ ಸರ್ಕಾರದ ಸೌಲಭ್ಯಗಳನ್ನು ನೀಡುವುದಕ್ಕೆ ಮೊದಲ ಆದ್ಯತೆ ನೀಡಲಾಗುತ್ತದೆ. ಕನಿಷ್ಠ 30 ಕುರಿಗಳನ್ನು ವಲಸೆ ಕುರಿಗಾರರು ಹೊಂದಿರಬೇಕು. ಆ ಕುಟುಂಬದ 4 ಸದಸ್ಯರು ಈ ವೃತ್ತಿಯಲ್ಲಿ ತೊಡಗಿಸಿಕೊಂಡಿರಬೇಕು. ಮತ್ತು 18 ರಿಂದ 70 ವಯಸ್ಸಿನವರು ವಿಮೆಯನ್ನು ಪಡೆಯಬಹುದು. ಸುಮಾರು 5 ಲಕ್ಷ ರೂ.ಗಳವರೆಗೆ ವಿಮಾ ಮೊತ್ತವನ್ನು ಪಡೆಯಬಹುದು ಎಂದು ಹೇಳಿದರು.

ಕೆಲವೊಮ್ಮೆ ವಿಮಾ ಮೊತ್ತವನ್ನು ಸರ್ಕಾರ ಸರಿಯಾದ ಸಮಯಕ್ಕೆ ಅವರ ಖಾತೆಗೆ ಹಾಕಿದ್ದರೂ ಸಹ ಕುರಿಗಾರರು ಬ್ಯಾಂಕ್‌ನಿಂದ ಸಾಲವನ್ನು ಪಡೆದಿದ್ದರೆ ಆ ಹಣವನ್ನು ಸಾಲಕ್ಕೆ ಜಮಾ ಮಾಡಿಕೊಂಡಿರುತ್ತಾರೆ. ಹಾಗಾಗಿ ಬ್ಯಾಂಕ್ ಪಾಸ್ ಬುಕ್ ಚೆಕ್ ಮಾಡಿಕೊಳ್ಳುವಂತೆ ಹೇಳಿದರು.

ಕುರಿಗಾರ ಮಂಜುನಾಥ್ ಮಾತನಾಡಿ, ನನ್ನ ಹತ್ತು ಕುರಿಗಳು ಆಕಸ್ಮಿಕವಾಗಿ ಮರಣ ಹೊಂದಿದ ಸಮಯದಲ್ಲಿ ವಿಮಾ ಕಂಪನಿಗೆ ಅರ್ಜಿ ಸಲ್ಲಿಸಲಾಯಿತು. ಆದರೆ 4-6 ತಿಂಗಳು ಕಳೆದರೂ ಇನ್ನೂ ನಮ್ಮ ಖಾತೆಗೆ ಹಣ ಜಮಾ ಆಗಿಲ್ಲ. ಕಚೇರಿಗೆ ಅಲೆದು ಅಲೆದು ಸಾಕಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯ ನಿರ್ದೇಶಕ ದೀಪಕ್ ಜೋಗಪ್ಪನವರ್, ಬಸವರಾಜಪ್ಪ, ಸಿದ್ದಪ್ಪ, ರಾಮಣ್ಣ,ನಾಗಪ್ಪ ಬಂಕಾಪುರ, ಬೀರಪ್ಪ, ಕಲ್ಲಪ್ಪ, ತಮ್ಮಣ್ಣ, ತುಕಾರಾಂ, ಭರಮ್ಮಪ್ಪ, ಸತೀಶ್, ಕರಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2 ದಿನ ಭೇಟಿಗಾಗಿ ರಾಜ್ಯಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕೃಷಿ ಉತ್ಪನ್ನಗಳ ದರ ಇಳಿಕೆ ಹಾಗೂ ಬೆಳೆಗೆ ಬೆಂಬಲ ಬೆಲೆ ಘೋಷಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಇಂದು ಬೆಳಿಗ್ಗೆ 10.30 ಕ್ಕೆ ಜಯದೇವ ವೃತ್ತದಿಂದ ಕೃಷಿ ಉತ್ಪನ್ನಗಳೊಂದಿಗೆ ಮೆರವಣಿಗೆ ನಡೆಸಲಾಗುವುದು ಎಂದು ಸಂಘದ ಉಪಾಧ್ಯಕ್ಷ ತೇಜಸ್ವಿ ವಿ. ಪಟೇಲ್ ತಿಳಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ಪ್ರತಿಭಟನೆ

ಕೇಂದ್ರದ ಬಿಜೆಪಿ ಸರ್ಕಾರವು ಸಿಬಿಐ ಹಾಗೂ ನಾಗರಿಕರ ಹಕ್ಕುಗಳ ಜಾರಿ ನಿರ್ದೇಶನಾಲಯಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದನ್ನು ಖಂಡಿಸಿ ಇಂದು ಬೆಳಿಗ್ಗೆ 10 ಕ್ಕೆ ತಾಲ್ಲೂಕು ಆಡಳಿತ ಸೌಧದ ಎದುರು ಪ್ರಕಾಶ್ ಕೋಳಿವಾಡರ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಮೀಣ ಘಟಕದ ಅಧ್ಯಕ್ಷ ಮಂಜನಗೌಡ ಪಾಟೀಲ, ನಗರ ಘಟಕದ ಅಧ್ಯಕ್ಷ ಶೇರುಖಾನ ಕಾಬೂಲಿ ತಿಳಿಸಿದ್ದಾರೆ.

## ಸಿದ್ದೇಶ್ವರ ಕಾಲೇಜಿಗೆ ಶೇ. 95.91

ದಾವಣಗೆರೆ, ಜೂ. 19- ನಗರದ ಶ್ರೀ ಸಿದ್ದೇಶ್ವರ ಪದವಿ ಪೂರ್ವ ಕಾಲೇಜು (ದಿ ಟೀಮ್ ಅಕಾಡೆಮಿ) ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 95.91 ಫಲಿತಾಂಶ ಪಡೆದುಕೊಂಡಿದೆ.

ಪಿ.ಎಂ. ಸೌರವ್ ಮತ್ತು ಸೂರ್ಯವರ್ಧನ ಹೆಚ್. ಪಾಟೀಲ್ 591 ಅಂಕಗಳನ್ನು ಪಡೆದು ರಾಜ್ಯಕ್ಕೆ 7 ನೇ ರ್‍ಯಾಂಕ್ ಹಾಗೂ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

294 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 143 ಡಿಸ್ಟಿಕ್ಷನ್, 156 ವಿದ್ಯಾರ್ಥಿಗಳು 500 ಕ್ಕಿಂತ ಹೆಚ್ಚು ಅಂಕಗಳಿಸಿದ್ದಾರೆ. 85 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ 100 ಕ್ಕೆ 100 ಅಂಕ ಗಳಿಸಿದ್ದಾರೆ.

ಭೌತಶಾಸ್ತ್ರದಲ್ಲಿ ಇಬ್ಬರು 100 ಕ್ಕೆ 100, ರಸಾಯನಶಾಸ್ತ್ರದಲ್ಲಿ 14 ವಿದ್ಯಾರ್ಥಿಗಳು 100 ಕ್ಕೆ 100, ಗಣಿತ ವಿಷಯದಲ್ಲಿ 63 ವಿದ್ಯಾರ್ಥಿಗಳು 100 ಕ್ಕೆ 100, ಜೀವಶಾಸ್ತ್ರದಲ್ಲಿ ಮೂವರು, ಗಣಕ ವಿಜ್ಞಾನದಲ್ಲಿ ಮೂವರು, ಕನ್ನಡ ಭಾಷಾ ವಿಷಯದಲ್ಲಿ ನಾಲ್ವರು ವಿದ್ಯಾರ್ಥಿಗಳು 100 ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ.

ಅತ್ಯುತ್ತಮ ಫಲಿತಾಂಶ ತಂದ ವಿದ್ಯಾರ್ಥಿಗಳನ್ನು ಪ್ರಾಚಾರ್ಯ ಕೆ.ಎಂ. ಮಂಜಪ್ಪ, ಕಾರ್ಯದರ್ಶಿ ನಾಗಭೂಷಣ ಅಭಿನಂದಿಸಿದ್ದಾರೆ.

## ಅಪ್ಪಂದಿರ ದಿನಾಚರಣೆ

ಅಪ್ಪ ಅಪ್ಪ ಅಪ್ಪ ನೀನಿದ್ದರೆ ಭಯವಿಲ್ಲಪ್ಪ
ಅಪ್ಪ ಅಪ್ಪ ಅಪ್ಪ ನೀನೇ ಯಜಮಾನನಪ್ಪ

ಏನೇ ಕಷ್ಟವು ಬರಲಿ ಎದುರಿಸಿ ಎಂದೆ ನೀನಪ್ಪ
ಬೇನೆ ಎಷ್ಟೇ ಇದ್ದರೂ ಸಹಿಸಿದೆ ನೀನೆ ಅಪ್ಪ
ನಾನಿರುವೆ ಹೆದರದಿರು ಎಂದು ನಿಂತೆಯಪ್ಪ
ನನ್ನ ಆಸೆಗಳನ್ನು ಈಡೇರಿಸಿ ನಕ್ಕೆ ನೀನಪ್ಪ

ಕೊಡೆಯಂತೆ ತಡದೆ ನೀನು ಕಷ್ಟದ ಮಳೆಬಿಸಿಲನ್ನು
ಗೋಡೆಯಂತೆ ನೀನಿಂದೆ ಪ್ರೀತಿಯ ನೀರೆರೆದೆ
ಅಡ್ಡದಾರಿಗಳ ಮುಚ್ಚಿ ಹೆದ್ದಾರಿಲಿ ಕರೆದೊಯ್ದೆ
ಬಿಡದೆ ನಮ್ಮಯ ಕೈಯ ಗುರಿಯನ್ನು ಮುಟ್ಟಿಸಿದೆ

ಪ್ರೋತ್ಸಾಹದ ಮಾತುಗಳಿಂದ ಹುರಿದುಂಬಿಸಿ ಎಬ್ಬಿಸಿದೆ
ಉತ್ಸಾಹದ ಚಿಲುಮೆ ಆಗಿ ನಗುನಗುತ ನಲಿಸಿದೆ
ಕಿತ್ತುತ ಭಯಗಳನು ಧೈರ್ಯ ಸ್ಥೈರ್ಯ ಮೂಡಿಸಿದೆ
ಉತ್ತಮ ಪ್ರಜೆಗಳಾಗಿ ನಮ್ಮನು ಅರಳಿಸಿದೆ

ಶಿಸ್ತು ಪ್ರೀತಿ ಆತ್ಮವಿಶ್ವಾಸ ಬಿತ್ತಿದೆ ನೀನು ಪ್ರೀತಿಯಲಿ
ನಿಸ್ವಾರ್ಥವಾಗಿ ಬಾಳುತ್ತ ಮಾದರಿಯಾದೆ ನೀನಪ್ಪ
ವಿಶ್ವವ್ಯಾಪಿ ಸಿರಿಹರಿಯ ಬಿಂಬವು ನೀನೆ ನಮ್ಮಪ್ಪ
ವಿಶ್ವಾಸ ಪ್ರೀತಿಯ ಆಗರವು ನಿನ್ನಂಥವರ್ಯಾರೂ ಇಲ್ಲಪ್ಪ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಸೊರಟೂರು ಆಂಜನೇಯ ದೇವಸ್ಥಾನದಲ್ಲಿ ಹುಂಡಿ ಹಣ ಎಣಿಕೆ



ಹೊನ್ನಾಳಿ, ಜೂ. 19- ತಾಲ್ಲೂಕಿನ ಸೊರಟೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಹುಂಡಿ ಎಣಿಕೆ ಕಾರ್ಯ ಮಂಗಳವಾರ ನೆರವೇರಿತು. ಸಂಗ್ರಹಗೊಂಡ 8 ಲಕ್ಷದ ಒಂದು ನೂರು ರೂ.ಗಳನ್ನು ಕೆನರಾ ಬ್ಯಾಂಕಿಗೆ ಜಮಾ ಮಾಡಲಾಯಿತು. ಗ್ರಾಮ ಲೆಕ್ಕಾಧಿಕಾರಿ ಎಚ್. ಆರ್. ಬಸವರಾಜ್, ಸಹಾಯಕ ಚಂದ್ರು ಮತ್ತು ಇತರರು ಇದ್ದರು.

## ನಗರದಲ್ಲಿ ಇಂದು 150 ಐಟಿಐಗಳ ಲೋಕಾರ್ಪಣೆ ಕಾರ್ಯಕ್ರಮ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರ ವತಿಯಿಂದ ತಾಂತ್ರಿಕ ಕೇಂದ್ರಗಳನ್ನಾಗಿ ಉನ್ನತೀಕರಿಸಲಾಗಿರುವ 150 ಐಟಿಐ ಗಳ ಲೋಕಾರ್ಪಣೆ ಕಾರ್ಯಕ್ರಮವು ಇಂದು ಮಧ್ಯಾಹ್ನ 3 ರಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಜರುಗಲಿದೆ.

ಕಾರ್ಯಕ್ರಮವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಲಿದ್ದು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಗೌರವ ಉಪಸ್ಥಿತಿ ಇರುವರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ, ವಿಪ ಮುಖ್ಯ ಸಚೇತಕ ಡಾ. ವೈ.ಎ.ನಾರಾಯಣಸ್ವಾಮಿ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್ ಮೇಯರ್ ಆರ್.ಜಯಮ್ಮ ಮತ್ತು ಇತರರು ಪಾಲ್ಗೊಳ್ಳಲಿದ್ದಾರೆ.


**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಛಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಸೈಟ್ ಮಾರಾಟಕ್ಕೆ**
ನಿಜಲಿಂಗಪ್ಪ 30x30, 30x35 ಪೂರ್ವ, S.S ಲೇಔಟ್ ಇಂಡೋರ್ ಹಿಂಭಾಗ 30x45.60x45 Hightec lay out 30x46, 30x47 ಪೂರ್ವ ರಾಘವೇಂದ್ರ ಹೈಟೆಕ್ 30x40 ಸೌತ್
ಕಿರಣ್ ಬೂಸ್ನೂರ್
98440-63409
(ಸೈಟ್ ಮನೆ ಮಾರಾಟಕ್ಕೆ ಕೊಳ್ಳುವುದಕ್ಕೆ ವಿಚಾರಿಸಿ)

**ಬಂಗಲೆ ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ (60 ಅಡಿ ರಸ್ತೆ) 50x101, 50x85, 50x70, ಪೂರ್ವ-ದಕ್ಷಿಣ ಕಾರ್ನರ್ (40 ಅಡಿ ರಸ್ತೆ) 40x62, ವಿದ್ಯಾನಗರ ಪಶ್ಚಿಮ 40x86.
ಐಗೂರು ವಿಜಯಕುಮಾರ್
99457 02495

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.
79750 35395

**ಶಿವ-ಪಾರ್ವತಿ ಲೇಔಟ್‌ನಲ್ಲಿ**
Euro Schoolಗೆ ಹತ್ತಿರ 40x87 East, 60x84 East, 30x50 North, 35x75 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಸೌತ್ ಇಂಡಿಯನ್ ಮತ್ತು ನಾರ್ತ್ ಇಂಡಿಯನ್ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಪ್ಲೈಯರ್, ಕ್ಲೀನರ್ ಬೇಕಾಗಿದ್ದಾರೆ.
95354 37451

**ಮನೆಯಲ್ಲಿ ನೀರು ಸೋರುವುದಕ್ಕೆ ಪರಿಹಾರ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್
81050 40110

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ Cook ಬೇಕಾಗಿದ್ದಾರೆ. ಸಂಬಳ : 12,000 ಸಸ್ಯಹಾರಿ, ಮಾಂಸಹಾರಿ ಗೊತ್ತಿರಬೇಕು. ಊಟ, ರೂಂ ಉಚಿತ. ಸಂಪರ್ಕಿಸಿ :
97400 98064, 97400 98047

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್.ಪಟೇಲ್ ಬಡಾವಣೆ, #788 ಸಿ 'ಡಿ' ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
98807 18509, 80956 04776

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇರುವ/ಇಲ್ಲದವರಾದರೂ ಸಂಪರ್ಕಿಸಬಹುದು.
ಬುನಿಯಾದ್
ಅಶೋಕ ರೋಡ್, ದಾವಣಗೆರೆ.
91641 25311, 98445 82000

**ಸೈಟ್ ಬೈ ಬ್ಯಾಕ್‌ಗೆ ಸಂಪರ್ಕಿಸಿ**
ದಾವಣಗೆರೆ ನಗರಕ್ಕೆ ಸಮೀಪ ಸೈಟ್ ಬೈ ಬ್ಯಾಕ್ ನೋಡುತ್ತಿರುವವರು ಹಾಗು ಸೈಟ್ ಖರೀದಿಗೆ ಆಸಕ್ತಿಯುಳ್ಳವರು ಸಂಪರ್ಕಿಸಿ
80880 60848

**WANTED**
Office Work - 1,
Sales - 1
Technician Service - 1
THE MOBILE SHOP
ASHOKA & AVK ROAD, DVG.
90608 83886

**ಸೂರ್ಯ ನವೋದಯ**
(4ನೇ ಮತ್ತು 5ನೇ ತರಗತಿ ಮಕ್ಕಳಿಗೆ) ಅಡ್ಮಿಷನ್ ಪ್ರಾರಂಭ :1.6.2022 ರಿಂದ. ತರಗತಿಗಳು ಪ್ರಾರಂಭ: 22.6.2022
ಸ್ಥಳ: K.S.S ಕಾಲೇಜು ಸರಸ್ವತಿ ಬಡಾವಣೆ ದಾವಣಗೆರೆ. ಸಮಯ: ಬೆಳಿಗ್ಗೆ 6-15 ರಿಂದ 7-45
ಸ್ಥಳ: ಕಾಮ್ರೇಡ್ ಲೆನಿನ್ ಶಾಲೆ ಡಾಂಗೇ ಪಾರ್ಕ್ ಹತ್ತಿರ, ದಾವಣಗೆರೆ. ಸಮಯ: ಸಂಜೆ. 5-15 ರಿಂದ 6-45
ಶ್ರೀ ಸುರೇಶ ಪಿ. ಮುರಗಿ M.Sc, B.Ed
99028 24909, 98447 48763

**ಬಾಡಿಗೆಗೆ ಮನೆಗಳು ದೊರೆಯುತ್ತವೆ ವಿಚಾರಿಸಿರಿ**
3 ಬೆಡ್ ರೂಂ ಮನೆ ಇಂಡಿಪೆಂಡೆಂಟ್ ಹೌಸ್ ಆಂಜನೇಯ ಬಡಾವಣೆಯಲ್ಲಿ 2 ಬೆಡ್ ರೂಂ ಇಂಡಿಪೆಂಡೆಂಟ್ ಹೌಸ್. ಎಸ್.ಎಸ್. 'ಬಿ' ಬ್ಲಾಕ್‌ನಲ್ಲಿ
ದಕ್ಷೀತ್ ಐನಳ್ಳಿ ಏಜೆಂಟ್
77955 06795

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**HR BPO JOB**
In Davangere
Female Candidates with fluent in English.
Any Qualification
93802 29199

**ಪ್ರವೇಶ ಪ್ರಕಟಣೆ**
ಶಾಲೆ ಬಿಟ್ಟಿದ್ದೀರಾ ? 7,8,9,10 SSLC ಫಾಸ್/ಫೇಲ್ ನೇರ ಪರೀಕ್ಷೆ ಕಲವೇ ಸೀಟುಗಳು ಮಾತ್ರ 10ನೇ ತರಗತಿ ಪಾಸಾದವರಿಗೆ. 11 PUC ನೇರ ಪರೀಕ್ಷೆ Science, Arts, Commerce ದೂರ ಶಿಕ್ಷಣದಲ್ಲಿ NTC, BA, B.Com, B.Sc, BBA,BSW, MA, M.Com, M.Sc, MBA, MCA, MSW, B.Ed, P.hd ಮಹಮ್ಮದನ್ NTC ಕಾಲೇಜ್ 1ನೇ ಮೇನ್, 12 ನೇ ಕ್ರಾಸ್ ಕೆ.ಟಿ.ಜೆ ನಗರ ದಾವಣಗೆರೆ.
93411 19195, 99800 32237

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಪ್ರಕಾಶ ಟಿವಿ ಸೆಂಟರ್
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**Site for Sale**
30x40 size East facing site in DCM Township, 3rd Main, 4th cross No/207 is for sale. No Brokers. Contact :
94822 41707

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

**ಬೇಕಾಗಿದ್ದಾರೆ**
ಹರ್ಷ ಅಸೋಸಿಯೇಟ್ಸ್ ಚೇತನ ಹೋಟೆಲ್ ಹತ್ತಿರ, ದಾವಣಗೆರೆ ಇಲ್ಲಿ ಕೆಲಸ ಮಾಡಲು ಡಿಗ್ರಿ ಆದ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
94480 56468

**ಹಾಲ್ ಬಾಡಿಗೆಗೆ ಇದೆ**
ಎಂಸಿಸಿ ಬಿ ಬ್ಲಾಕ್, ಮಾಮಾಸ್ ಜಾಯಿಂಟ್ ರಸ್ತೆಯ ಶಿಲ್ಪ ಡಯಾಗ್ನಸ್ಟಿಕ್ ಪಕ್ಕದ ಕಟ್ಟಡದ ಒಂದನೇ ಮಹಡಿಯಲ್ಲಿ 1500 ಚ.ಅಡಿಯ ಹಾಲ್ ಬಾಡಿಗೆಗೆ ಇದೆ. ಸಂಪರ್ಕಿಸಿ :
98440 65638

**ಬೇಕಾಗಿದ್ದಾರೆ**
ಮೆ|| ಆರ್. ಹನುಮಂತಪ್ಪ ಅಂಡ್ ಸನ್ ಸಂಸ್ಥೆಯಲ್ಲಿ ವಾಚ್‌ಮನ್ (ಓದು, ಬರಹ ಬಲ್ಲವರು) ಮತ್ತು ಶ್ರೀ ಲಾಡ್ಜ್‌ನಲ್ಲಿ ಕಂಪ್ಯೂಟರ್ ಜ್ಞಾನ ಮತ್ತು ಅನುಭವ ಹೊಂದಿರುವವರು ಸೂಪರ್ ವೈಸರ್ ಮತ್ತು ರೂಮ್ ಬಾಯ್ ಎರಡೂ ಹುದ್ದೆಗಳಿಗೆ ಶಿಫ್ಟ್‌ಗಳಲ್ಲಿ ಕೆಲಸ ಮಾಡಲು ಸಿದ್ಧವಿರುವ ಕೆಲಸಗಾರರು ಬೇಕಾಗಿದ್ದಾರೆ. ಆಸಕ್ತರು ಈ ಕೆಳಗಿನ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಕೋರಲಾಗಿದೆ.
ಮೆ|| ಆರ್. ಹನುಮಂತಪ್ಪ ಅಂಡ್ ಸನ್
ಹನುಮಂತಪ್ಪನವರ ಕಟ್ಟಡ, ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ-577002.
ದೂರವಾಣಿ: 08192-258834 /258836

**ಬೇಕಾಗಿದ್ದಾರೆ**
ಕನ್ನಡ ಬೋಧಿಸುವ B.A, B.Ed, MA, B.Ed ತರಬೇತಿ ಪಡೆದ ಶಿಕ್ಷಕರು ಬೇಕಾಗಿದ್ದಾರೆ. ದೈಹಿಕ ಶಿಕ್ಷಕರೂ ಸಂಪರ್ಕಿಸಬಹುದು
ನಂದಗೋಕುಲ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆ
ಆರ್.ಟಿ.ಓ. ಆಫೀಸ್ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ. ಮೊ. 99640-17729

**ಸ್ನೇಹಿತರೇ...**
ಅತೀ ಕಡಿಮೆ ಬಂಡವಾಳದಿಂದ ನಿಮ್ಮದೇ ಆದ ಸ್ವಂತ Businessನ್ನು ಆರೋಗ್ಯ & ಐಶ್ವರ್ಯದೊಂದಿಗೆ ಪ್ರಾರಂಭಿಸಿ. ತರಬೇತಿಗಾಗಿ ಸಂಪರ್ಕಿಸಿ :
ಅಜಯ್ Wellness coach
96635 88115

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**ಉಚಿತ ಶಿಕ್ಷಣ**
ನಗರದ ಪ್ರತಿಷ್ಠಿತ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುವುದು (ಅದರಲ್ಲೂ ವಿಶೇಷವಾಗಿ 8ನೇ ತರಗತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಗೆ) ಆಸಕ್ತ ವಿದ್ಯಾರ್ಥಿಗಳು ಮತ್ತು ಪೋಷಕರು ಈ ಕೂಡಲೇ ಸಂಪರ್ಕಿಸಿ :
90080 58144, 99723 47619

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಬೇಕಾಗಿದ್ದಾರೆ**
ದಾವಣಗೆರೆಯ ವಿದ್ಯಾನಗರದಲ್ಲಿರುವ ಕಚೇರಿಯೊಂದಕ್ಕೆ ಸಹಾಯಕರೊಬ್ಬರು ಬೇಕಾಗಿದ್ದಾರೆ. ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂವಹನ ನಡೆಸುವ & ಕಂಪ್ಯೂಟರ್ ಜ್ಞಾನ ಅಗತ್ಯ. ನಿಮ್ಮ ಬಯೋಡಾಟಾ ಕಳುಹಿಸಿ :
directorpaeltd@gmail.com
99804 38600

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**Wanted**
ANJUM PU & DEGREE COLLEGE, B.S Nagara, Davanagere- 2.
Require Lecturers
English- 2, Commerce- 3
Contact- 97437 00743
97402 65935

**ಮೊಬೈಲ್ ಶಾಪ್ ಬಾಡಿಗೆಗೆ ಇದೆ**
ನಗರದ ಪಿ.ಜೆ ಬಡಾವಣೆ, ಚೇತನ ಹೋಟೆಲ್ ರಸ್ತೆಯಲ್ಲಿ ಬಿ.ಎಸ್ಸಿ ಮೆನ್ಸ್ ಹತ್ತಿರ 11x16 ಅಳತೆಯ, ರೆಡಿ ಫರ್ನೀಚರ್ ಇರುವ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಇರುವ ಮಳಿಗೆ ಬಾಡಿಗೆಗೆ ಇದೆ.
ಆಸಕ್ತರು ಸಂಪರ್ಕಿಸಿ :
98440 15114, 83100 73553

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ಸ್ಪೋಕನ್ ಇಂಗ್ಲಿಷ್**
ಕಂಪ್ಯೂಟರ್ ಕ್ಲಾಸಸ್ ಶಾಲಾ ಮಕ್ಕಳಿಗೆ / ವಯಸ್ಕರಿಗೆ. ದಾವಣಗೆರೆ, ರಾಮ್&ಕೋ ಸರ್ಕಲ್
Ph: 9380229199

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು/ವಾದಿಯರಾದ (1) ಶ್ರೀಮತಿ ರೇಖಾ ಕೋಂ ಚಂದ್ರಶೇಖರ್, ವಯಸ್ಸು: 38 ವರ್ಷ ಗೃಹಿಣಿ #1042, 1ನೇ ಹಂತ, ಎಸ್.ಪಿ.ಎಸ್ ನಗರ ದಾವಣಗೆರೆ ಮತ್ತು (2) ಶ್ರೀಮತಿ ಬಾದುಬಾಯಿ ಕೋಂ ನಾಗರಾಜ ನಾಯ್ಕ, ವಯಸ್ಸು : 48 ವರ್ಷ, ಗೃಹಿಣಿ, # 1001, 1ನೇ ಹಂತ ಎಸ್.ಪಿ.ಎಸ್ ನಗರ, ದಾವಣಗೆರೆ ಇವರುಗಳು ಘನ ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಇವರಲ್ಲಿ ಡಿಕ್ಲರೇಷನ್ & ಮ್ಯಾಂಡೇಟರಿ ಇಂಜೆಕ್ಷನ್ ಕೋರಿ ಅಸಲು ದಾವೆ ಸಂ: 498/2021ರ ಅಡಿಯಲ್ಲಿ ಘನ ನ್ಯಾಯಾಲದ ಮುಂದೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ಪ್ರತಿವಾದಿಗಳನ್ನಾಗಿ (1) ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ (2) ಇಮ್ತಿಯಾಜ್ ಹುಸೇನ್ ಬಿನ್ ಅಬ್ದುಲ್ ರೆಹಮಾನ್ ಸಾಬ್, ಮಾಜಿ ಅಧ್ಯಕ್ಷರು, ಆಶ್ರಯ ಸಮಿತಿ, ದಾವಣಗೆರೆ, ವಿಳಾಸ: #1560, 2ನೇ ಕ್ರಾಸ್, ಅಹ್ಮದ್ ನಗರ, ದಾವಣಗೆರೆ ಮತ್ತು (3) ಮಹಬೂಬ್ ಬಿನ್ ಅಬ್ದುಲ್ ರೆಮಾನ್ ಸಾಬ್, ವಿಳಾಸ: 1ನೇ ಹಂತ, ಎಸ್.ಪಿ.ಎಸ್. ನಗರ ದಾವಣಗೆರೆ ಇವರ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣ ಘನ ನ್ಯಾಯಾಲಯದ ಮುಂದೆ ಚಾಲ್ತಿ ವಿಚಾರಣೆ ಹಂತದಲ್ಲಿ ಇರುತ್ತದೆ. ಈ ಮಧ್ಯೆ ಪ್ರತಿವಾದಿಗಳಾದ 2ನೇ ಇಮ್ತಿಯಾಜ್ ಹುಸೇನ್ ಬಿನ್ ರೆಹಮಾನ್ ಸಾಬ್, ಮಾಜಿ ಅಧ್ಯಕ್ಷರು, ಆಶ್ರಯ ಸಮಿತಿ, ದಾವಣಗೆರೆ ಮತ್ತು 3ನೇ ಮಹೂಬೂಬ್ ಬಿನ್ ಅಬ್ದುಲ್ ರೆಹಮಾನ್ ಸಾಬ್, ದಾವಣಗೆರೆ ಇವರುಗಳು ತರಾತುರಿಯಲ್ಲಿ ಕೆಲವೊಂದು ಅಕ್ರಮ ದಾಖಲೆಗಳನ್ನು ಸೃಷ್ಟಿಸಿಕೊಂಡು ಈ ಕೆಳಕಂಡ ಷೆಡ್ಯೂಲ್ ಸೊತ್ತಿನಲ್ಲಿ ವಿವರಿಸಿರುವ ಆಸ್ತಿಯನ್ನು ಬೇರೊಬ್ಬರ ಹೆಸರಿಗೆ ಮಾರಾಟ, ಪರಭಾರೆ ವಗೈರೆ ಮಾಡಲು ಇಚ್ಛಿಸಿರುತ್ತಾರೆ ಎಂಬ ವರ್ತಮಾನ ನನ್ನ ಕಕ್ಷಿದಾರರು/ವಾದಿಯವರ ಗಮನಕ್ಕೆ ಬಂದಿರುತ್ತದೆ.

ಆದುದರಿಂದ ಈ ಕೆಳಕಂಡ ಷೆಡ್ಯೂಲ್ ಸೊತ್ತಿನ ಆಸ್ತಿಯನ್ನು ಸಾರ್ವಜನಿಕರು ಪ್ರತಿವಾದಿ ಸಂಖ್ಯೆ 2 ರಿಂದ 3ನೇ ಯವರಿಂದ ಯಾವುದೇ ರೀತಿಯಿಂದಲೂ, ಮಾರಾಟ, ಪರಭಾರೆ, ಲೀಜ್ ವಗೈರೆ ಇನ್ನಿತರೆ ಕೃತ್ಯಗಳಲ್ಲಿ ಹಾಗೂ ಮಾರಾಟದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಾರದೆಂಬುದಾಗಿ ಸೂಚಿಸಲಾಗಿದೆ ಹಾಗೂ ಯಾವುದೇ ದಾಖಲೆಗಳನ್ನು ಮಾಡಿಕೊಳ್ಳಬಾರದು, ಕ್ರಯ/ವಿಕ್ರಯದಲ್ಲಿ ಪಾಲ್ಗೊಳ್ಳಬಾರದು ಎಂದು ಈ ಸಾರ್ವಜನಿಕರ ಪ್ರಕಟಣೆ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಹಾಗೇನಾದರೂ ಸದರಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ, ಒಕ್ಕಣೆಗಳು ನಡೆದಿದ್ದೇ ಆದಲ್ಲಿ ಅದಕ್ಕೆ ಈ ದಾವೆಯ ವಾದಿಯರಿಗೆ ಯಾವುದೇ ರೀತಿಯಿಂದಲೂ ಬಾಧಕರಾಗುವುದಿಲ್ಲ ಹಾಗು ಮುಂದೆ ಉಂಟಾದ ಕಾನೂನು ಹೋರಾಟ, ಲುಕ್ಸಾನುಗಳಿಗೆ ಕಕ್ಷಿದಾರರು/ವಾದಿಯರು ಬಾಧ್ಯಸ್ಥರಿರುವುದಿಲ್ಲ, ಈಗಾಗಲೇ ಉಪ ನೋಂದಣಾಧಿಕಾರಿಗಳ ಕಚೇರಿಗೆ ನನ್ನ ಕಕ್ಷಿದಾರರು/ವಾದಿಯರು ಲಿಖಿತ ತಕರಾರು ಅರ್ಜಿಯನ್ನು ಸಹ ಸಲ್ಲಿಸಿರುತ್ತಾರೆ ಎಂದು ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸಿದೆ.

**ಷೆಡ್ಯೂಲ್**

ದಾವಣಗೆರೆ ಸಿಟಿ, ಎಸ್.ಪಿ.ಎಸ್. ನಗರ ಬೂದಾಳ್ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇರುವ ಪ್ರತಿವಾದಿಯ ಹೆಸರಿನಲ್ಲಿರುವ ಕಟ್ಟಡ ಒಟ್ಟು ಅಳತೆ: 15x40 ಅಡಿ ಆರ್.ಸಿ.ಸಿ. ಹೊದಿಕೆಯುಳ್ಳ ನಾಲ್ಕು ವಾಣಿಜ್ಯ ಮಳಿಗೆಗಳಿಗೆ ಚಕ್ಕುಬಂದಿ:
ಪೂರ್ವಕ್ಕೆ : ವಾದಿಯರ ಮನೆ ನಂ. 1001 ಮತ್ತು 1042 ಪಶ್ಚಿಮಕ್ಕೆ: ಬೂದಾಳ್ ರಸ್ತೆ, ಉತ್ತರಕ್ಕೆ : ರಸ್ತೆ ದಕ್ಷಿಣಕ್ಕೆ ರಸ್ತೆ

ತಮ್ಮ ವಿಶ್ವಾಸಿ
ಶ್ರೀ ಎಸ್.ಕುಮಾರ ನಾಯ್ಕ, ನ್ಯಾಯವಾದಿಗಳು
ಜಸ್ಟೀಸ್ ಲಾ ಸಲ್ಯೂಷನ್ಸ್
ಅಮೃತಾನಂದಮಯಿ ಶಾಲೆ ಹತ್ತಿರ ಮುಖ್ಯರಸ್ತೆ, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ-577004. ಮೊ: 98808 47776

## ಸಹಕಾರ ಸಂಘಗಳ ಉಪ ನಿಬಂಧಕರು ಹಾಗು ಚೀಟಿ ನಿಧಿಗಳ ಉಪ ನಿಬಂಧಕರು ದಾವಣಗೆರೆ ಜಿಲ್ಲೆ ದಾವಣಗೆರೆ ಇವರ ನ್ಯಾಯಾಲಯ

ಜಿಲ್ಲಾಡಳಿತ ಭವನ, 2ನೇ ಮಹಡಿ, 'ಬಿ' ಬ್ಲಾಕ್, ಕೊಠಡಿ ಸಂಖ್ಯೆ 52, 53, ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ದಾವಣಗೆರೆ.

D.R./DVG/CHIT/DIS/02/2022-2023

**ಅರ್ಜಿದಾರರು:-ಶ್ರೀ ಗುರು ಚಿಟ್ ಫಂಡ್ಸ್ (ರಿ)** ಶಾಪ್ ನಂ.1, 2ನೇ ಮಹಡಿ, ಕುರುಬರ ಹಾಸ್ಟೆಲ್ ಕಾಂಪ್ಲೆಕ್ಸ್ ಜಯದೇವ ಸರ್ಕಲ್ ಹತ್ತಿರ, ಹದಡಿ ರೋಡ್ , ದಾವಣಗೆರೆ.

**ಎದುರುದಾರರು**

**ರವಿ ನಾಯ್ಕ ಕೆ. ಮತ್ತು ಇತರರು**
1. **ರವಿ ನಾಯ್ಕ ಕೆ. ಬಿನ್. ಕೃಷ್ಣ ನಾಯ್ಕ,** ಬೀಡಾ ಶಾಪ್, ನಂಬರ್ 776, 1st ಮೇನ್, 4ನೇ ಕ್ರಾಸ್, ಎಸ್.ಎಂ. ಕೃಷ್ಣ ನಗರ, ಬೂದಾಳ್ ರೋಡ್, ದಾವಣಗೆರೆ.
4. **ಕಿರಣ್ ನಾಯ್ಕ ಬಿನ್ ಕೃಷ್ಣ ನಾಯ್ಕ** ನಂಬರ್ 776, 1st ಮೇನ್, 4ನೇ ಕ್ರಾಸ್, ಎಸ್.ಎಂ. ಕೃಷ್ಣ ನಗರ, ಬೂದಾಳ್ ರೋಡ್, ದಾವಣಗೆರೆ.

**ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ನೀಡಲಾದ ಪತ್ರಿಕಾ ಪ್ರಕಟಣೆ ನೋಟೀಸ್**

ಮೇಲ್ಕಂಡ ವ್ಯಾಜ್ಯದಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ದಾವಾ ಮೊತ್ತ ಮತ್ತು ಈ ನ್ಯಾಯಾಲಯದ ವೆಚ್ಚದ ವಸೂಲಾತಿಗಾಗಿ ಚಿಟ್ ಫಂಡ್ ಕಾಯ್ದೆ 1982 ಕಲಂ 64ರ ಅನ್ವಯ ಈ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಈ ನ್ಯಾಯಾಲಯದಿಂದ ಎದುರುದಾರರಾದ ನಿಮಗೆ ಈ ವ್ಯಾಜ್ಯದ ವಿಚಾರಣೆಗೆ ಹಾಜರಾಗಲು ನೋಂದಣಿ ಅಂಚೆ ಮೂಲಕ ನೋಟೀಸ್ ಕಳಿಸಿದ್ದು ನಿಮಗೆ ನೋಟೀಸ್ ಜಾರಿ ಆಗದ ಕಾರಣ ಮೇಲ್ಕಂಡ ಎದುರುದಾರರು ದಿನಾಂಕ 24.06.2022 ರಂದು ಮಧ್ಯಾಹ್ನ 3 ಗಂಟೆಗೆ ಈ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ ತಮ್ಮ ಅನುಪಸ್ಥಿತಿಯನ್ನು ಏಕ ಪಕ್ಷೀಯವೆಂದು ಪರಿಗಣಿಸಿ ಅರ್ಹತೆಯ ಆಧಾರದ ಮೇಲೆ ಈ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದೆಂದು ತಿಳಿಯತಕ್ಕದ್ದು. ಈ ನೋಟೀಸನ್ನು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 06.06.2022ರಂದು ನೀಡಿದೆ

ಸ್ಥಳ: ದಾವಣಗೆರೆ
ದಿನಾಂಕ : 06.06.2022

ಸಹಕಾರ ಸಂಘಗಳ ಉಪನಿಬಂಧಕರು ಹಾಗು ಚೀಟಿ ನಿಧಿಗಳ ಉಪನಿಬಂಧಕರು ದಾವಣಗೆರೆ ಜಿಲ್ಲೆ


**Makeup Classes**
Professional makeup Artist Courses
ಕಲಿಸಿಕೊಡಲಾಗುತ್ತದೆ.
(ಸರ್ಟಿಫಿಕೇಟ್ ಕೊಡಲಾಗುತ್ತದೆ.)
81974 43214

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**VACANCY**

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Accountants (Junior) | 10 | B.Com / M.Com / MBA TALLY / ERP / SAP | 0-1 |
| 02 | Accounts (Senior) | 05 | Bcom / Mcom / MBA GST / INCOME TAX / SAP | 5 |
| 03 | Sales Executives for marketing retail & Project. with 2-wheeler | 10 | Any Degree (Diploma/ITI) | 0-1 |

HULLUMANE PROPERTIES & POWER PVT LTD.,
# Depot Address - Beside Lalitha International School, Behind Shashi Soap Factory
Land Mark-Towards Shiramagondanahalli Road, From Lokikere Road
Lokikere Industrial Area, Davangere-577 005. Karnataka
Drop Resume to Email - hrhullumanepropertiespwr@yahoo.com

**WANTED**
SALES AND MARKETING EXECUTIVE
Education: 10th pass+
Salary: 12-15K/ month + Incentive
Language: Kannada, Hindi, English
For Walk In: Chalo Office, No 77, Private bus stand near high school field. AVK College road Davanagere. 577001
Timing: Monday - Saturday 11:00 AM- 04:00 PM
Contact : 9606818611

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜೂನ್ 20, 2022



# ಸಿದ್ಧಗಂಗಾ ಶ್ರೀಗಳ ಸಮಾಜ ಸೇವೆ ಅನನ್ಯ

## 115 ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ರಟ್ಟೆಹಳ್ಳಿ ಶಿವಲಿಂಗ ಶ್ರೀಗಳು

ದಾವಣಗೆರೆ, ಜೂ. 19 - ಸಿದ್ಧಗಂಗಾ ಜಗದ್ಗುರು ಲಿಂ. ಡಾ. ಶಿವಕುಮಾರ ಮಹಾಸ್ವಾಮಿಗಳು ಲಕ್ಷಾಂತರ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ದಾಸೋಹ, ವಸತಿ ಕಲ್ಪಿಸುವ ಮೂಲಕ ಜನ ಮಾನಸದಲ್ಲಿ ಸ್ಮರಣೀಯರಾಗಿದ್ದಾರೆ. ಅವರ ಸಾಮಾಜಿಕ ಸೇವೆ ಅನನ್ಯವಾದುದು ಎಂದು ರಟ್ಟೆಹಳ್ಳಿ ಕಬ್ಬಿಣಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ನುಡಿದರು.

ನಗರದ ಜಿಲ್ಲಾ ಗುರುಭವನದಲ್ಲಿ ಭಾನುವಾರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಚನ ಸಾಹಿತ್ಯ ಪರಿಷತ್, ಸಮಾನ ಮನಸ್ಕರ ಒಕ್ಕೂಟ, ಸ್ಫೂರ್ತಿ ಪ್ರಕಾಶನ, ಯೋಗಾನಂದ ಯೋಗ ಕೇಂದ್ರ, ಬಜ್ಜಿ ಹನುಮಂತಪ್ಪ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ. ಶಿವಕುಮಾರ ಸ್ವಾಮೀಜಿಯವರ 115 ನೇ ಜಯಂತ್ಯುತ್ಸವ, ಗುರುವಂದನಾ ಹಾಗೂ ಸಾಧಕರ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿಯವರು ತ್ರಿವಿಧ ದಾಸೋಹ, ತ್ಯಾಗ, ಸೇವೆ, ಆದರ್ಶ ಮತ್ತು ಮೌಲ್ಯಯುತ ಜೀವನದ ಮೂಲಕ ಈ ಕ್ಷಣಕ್ಕೂ ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ ಎಂದರು.

ಶಿವಕುಮಾರ ಶ್ರೀಗಳ ಆದರ್ಶ, ಮೌಲ್ಯಗಳಲ್ಲಿ ಕೆಲವನ್ನಾದರೂ ಪಾಲಿಸಿದರೆ ಅವರ ಜಯಂತಿ, ಪುಣ್ಯಸ್ಮರಣೆಗೆ ಸಾರ್ಥಕತೆ ಬರುತ್ತದೆ. ಪ್ರತಿಯೊಬ್ಬರೂ ಸಹ ಮೌಲ್ಯಯುತ ಜೀವನ ಸಾಗಿಸುವಂತೆ ಕರೆ ನೀಡಿದರು.

ಜೀವನದಲ್ಲಿ ಸೇವೆ ಅತ್ಯಂತ ಮಹತ್ವವಾದುದು. ಜನಸಮಾನ್ಯರಿಗೆ, ಸಮಾಜಕ್ಕೆ ಮಾಡಿದ ಸೇವೆಯನ್ನು ಸದಾಕಾಲ ಸ್ಮರಿಸಲಾಗುತ್ತದೆ. ಮೂರು ಸಾವಿರ ವರ್ಷಗಳ ಹಿಂದಿನ ಬುದ್ಧ, ಒಂದು ಸಾವಿರ ವರ್ಷಗಳ ಹಿಂದಿನ ಬಸವಣ್ಣ, 100 ವರ್ಷಗಳ ಹಿಂದಿನ ಮಹಾತ್ಮ ಗಾಂಧೀಜಿ ಮುಂತಾದ ದಾರ್ಶನಿಕರು, ಸಾಧು-ಸಂತರು, ಮಹನೀಯರು ಸಮಾಜಕ್ಕೆ ಸಲ್ಲಿಸಿದ ಸೇವೆಯಿಂದ ಅವರು ಪ್ರಾತ:ಸ್ಮರಣೀಯರಾಗಿದ್ದಾರೆಂದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಸಿದ್ಧಗಂಗಾ ಮಠದ ಲಿಂ. ಶಿವಕುಮಾರ ಸ್ವಾಮೀಜಿಯವರು ಅನೇಕ ವರ್ಷಗಳ ಕಾಲ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ, ದಾಸೋಹ ಸೇವೆ ನೀಡುವ ಮೂಲಕ ಇಡೀ ಸಮಾಜಕ್ಕೆ (2ನೇ ಪುಟಕ್ಕೆ)

# ಅಗ್ನಿಪಥ: 1ಲಕ್ಷದವರೆಗೆ ನೇಮಕ

## ವಿಧ್ವಂಸಕ ಕೃತ್ಯದಲ್ಲಿ ಭಾಗಿಯಾದವರಿಗೆ ಸೈನ್ಯದಲ್ಲಿ ಪ್ರವೇಶವಿಲ್ಲ

ನವದೆಹಲಿ, ಜೂ. 19- ಅಗ್ನಿಪಥ ಯೋಜನೆಯಡಿ ಮುಂದಿನ ವರ್ಷಗಳಲ್ಲಿ 90 ಸಾವಿರದಿಂದ 1 ಲಕ್ಷದವರೆಗೆ ಸೈನಿಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಸೈನಿಕ ವ್ಯವಹಾರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಲೆಫ್ಟಿನೆಂಟ್ ಜನರಲ್ ಅನಿಲ್ ಪುರಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಮುಂದಿನ 4-5 ವರ್ಷಗಳವರೆಗೆ ಪ್ರತಿ ವರ್ಷ 50 ರಿಂದ 60 ಸಾವಿರದವರೆಗೆ ಸೈನಿಕರ ನೇಮಕ ವಾಗಲಿದೆ. ನಂತರದಲ್ಲಿ ನೇಮಕಾತಿ ಹೆಚ್ಚಳವಾಗಲಿದೆ ಎಂದಿದ್ದಾರೆ.

ಅಗ್ನಿಪಥ ಯೋಜನೆಯ ವಿರುದ್ಧ ದೇಶಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳ ಬಗ್ಗೆ ಮಾತನಾಡಿರುವ ಅವರು, ಭಾರತೀಯ ಸೈನ್ಯಕ್ಕೆ ಶಿಸ್ತು ಅಡಿಪಾಯವಾಗಿದೆ. ವಿಧ್ವಂಸಕ ಕೃತ್ಯ ಹಾಗೂ ಅಗ್ನಿಸ್ಪರ್ಷದಂತಹ ಕೃತ್ಯಗಳನ್ನು ಎಸಗುವವರಿಗೆ ಸೈನ್ಯದಲ್ಲಿ ಯಾವುದೇ ಜಾಗವಿಲ್ಲ ಎಂದು ತಿಳಿಸಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿಯೂ ಸೈನ್ಯಕ್ಕೆ ಸೇರುವ ಸಂದರ್ಭದಲ್ಲಿ ಪ್ರತಿಭಟನೆ ಇಲ್ಲವೇ ವಿಧ್ವಂಸಕ ಕೃತ್ಯದಲ್ಲಿ ಭಾಗಿಯಾಗಿಲ್ಲ ಎಂಬ ಪ್ರಮಾಣ ಪತ್ರ ಹಾಜರು ಪಡಿಸಬೇಕಿದೆ. ಪೊಲೀಸ್ ಪರಿಶೀಲನೆ ಕಡ್ಡಾಯವಾಗಿದ್ದು, ಇದಿಲ್ಲದೇ ಯಾರೂ ಸೈನ್ಯ ಸೇರುವಂತಿಲ್ಲ ಎಂದು ಲೆಫ್ಟಿನೆಂಟ್ ಜನರಲ್ ಪುರಿ ಹೇಳಿದ್ದಾರೆ.

### ನವೆಂಬರ್ ನಂತರ ಸಿಬ್ಬಂದಿಗೆ ತರಬೇತಿ

ನವದೆಹಲಿ, ಜೂ. 19- ಅಗ್ನಿಪಥ ಯೋಜನೆ ಯಡಿ ಸೈನಿಕರನ್ನು ಸೇರಿಸಿಕೊಳ್ಳುವ ವಿಸ್ತೃತ ವೇಳಾಪಟ್ಟಿಯನ್ನು ಸೈನ್ಯದ ಮೂರೂ ಪಡೆಗಳು ಪ್ರಕಟಿಸಿವೆ.

ಪಡೆಗಳಲ್ಲಿ ಸೈನಿಕರ ಸರಾಸರಿ ವಯೋಮಾನವನ್ನು ಇಳಿಕೆ ಮಾಡಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಸೈನ್ಯ, ನೌಕಾ ದಳ ಹಾಗೂ ವಾಯುಪಡೆಗಳು ತಿಳಿಸಿವೆ.

ಯೋಜನೆಯನ್ನು ಬಲವಾಗಿ ಸಮರ್ಥಿಸಿಕೊಂಡಿರುವ ಸೈನ್ಯದ ವ್ಯವಹಾರಗಳ ಇಲಾಖೆಯ ಲೆಫ್ಟಿನೆಂಟ್ ಜನರಲ್ ಎ. ಪುರಿ, ಸಾಕಷ್ಟು ದಿನಗಳಿಂದ ಸೈನಿಕರ ಸರಾಸರಿ ವಯೋಮಾನ ಇಳಿಸುವ ಪ್ರಸ್ತಾಪ ಇತ್ತು. ಕಾರ್ಗಿಲ್ ಪರಿಶೀಲನಾ ಸಮಿತಿ ಸಹ ಈ ಬಗ್ಗೆ ಟಿಪ್ಪಣಿ ಮಾಡಿತ್ತು ಎಂದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಲೆಫ್ಟಿನೆಂಟ್ ಜನರಲ್ ಪುರಿ, ಅಗ್ನಿಪಥ ಯೋಜನೆ ಜಾರಿಗೊಳಿಸುವಲ್ಲಿ ಸರ್ಕಾರ ಮುಂದುವರೆಯಲಿದೆ. ಯುವಕರು ಪ್ರತಿಭಟನೆ ಅಂತ್ಯಗೊಳಿಸಬೇಕು ಎಂದು ಕರೆ ನೀಡಿದ್ದಾರೆ.

ನೌಕಾ ದಳದ ನೇಮಕಾತಿ ವಿವರ ನೀಡಿರುವ ವೈಸ್ ಅಡ್ಮಿರಲ್ ದಿನೇಶ್ ತ್ರಿಪಾಠಿ, ಜೂನ್ 25ರ ಒಳಗೆ ನೇಮಕದ ವಿಸ್ತೃತ ಮಾರ್ಗಸೂಚಿ ಪ್ರಕಟಿಸಲಾಗುವುದು. ನವೆಂಬರ್ 21ರಂದು ಹೊಸ ತಂಡದ ತರಬೇತಿ ಆರಂಭವಾಗಲಿದೆ ಎಂದು ಹೇಳಿದ್ದಾರೆ.

ವಾಯುಪಡೆಯ ನೇಮಕಾತಿ ಕುರಿತು ವಿವರ ನೀಡಿರುವ ಏರ್ ಮಾರ್ಷಲ್ ಎಸ್.ಕೆ. ಝಾ, ಜೂನ್ 24ರಂದು ನೋಂದಣಿ ಆರಂಭವಾಗಲಿದೆ. ಜುಲೈ 24ರಿಂದ ಆನ್‌ಲೈನ್ ಪರೀಕ್ಷೆ ನಡೆಯಲಿದೆ. ಡಿಸೆಂಬರ್ 30ರಂದು ಮೊದಲ ತಂಡದ ತರಬೇತಿ ಆರಂಭವಾಗಲಿದೆ ಎಂದಿದ್ದಾರೆ.

ಸೈನ್ಯದ ನೇಮಕಾತಿ ಬಗ್ಗೆ ಮಾತನಾಡಿರುವ ಲೆಫ್ಟಿನೆಂಟ್ ಜನರಲ್ ಬನ್ಸಿ ಪೊನ್ನಪ್ಪ, ಸೋಮವಾರ ಕರಡು ಅಧಿಸೂಚನೆ ಪ್ರಕಟಿಸ ಲಾಗುವುದು. ಜುಲೈ 1ರ ನಂತರ ಸೈನ್ಯದ ವಿವಿಧ ವಿಭಾಗಗಳಿಂದ ನೇಮಕಾತಿ ಅಧಿಸೂಚನೆ ಪ್ರಕಟಿಸಲಾಗುವುದು ಎಂದಿದ್ದಾರೆ.

ಆಗಸ್ಟ್, ಸೆಪ್ಟೆಂಬರ್ ಹಾಗೂ ಅಕ್ಟೋಬರ್ ಅವಧಿಯಲ್ಲಿ ದೇಶಾದ್ಯಂತ ನೇಮಕಾತಿ ಸಮಾವೇಶಗಳನ್ನು ನಡೆಸಲಾಗುವುದು ಎಂದವರು ತಿಳಿಸಿದ್ದಾರೆ.

ಮೊದಲ ಹಂತದಲ್ಲಿ (2ನೇ ಪುಟಕ್ಕೆ)

# ಶಾಸಕ ರಾಮಪ್ಪ ಜನ್ಮ ದಿನದಂದು ಸಾಮೂಹಿಕ ವಿವಾಹ



ಹರಿಹರ, ಜೂ. 19 - ಬರುವ ಜುಲೈ 22ರ ಶುಕ್ರವಾರದಂದು ಸರ್ವ ಧರ್ಮಗಳ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಎಸ್. ರಾಮಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ 65ನೇ ಜನ್ಮ ದಿನದ ಅಂಗವಾಗಿ ಎಸ್.ರಾಮಪ್ಪ ಅಭಿಮಾನಿ ಬಳಗದಿಂದ ನಗರದ ಗಾಂಧಿ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದರು.

ಕೋವಿಡ್‌ನಿಂದಾಗಿ ಹಲವಾರು ಕುಟುಂಬಗಳು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿವೆ. ಇದನ್ನು ಮನಗಂಡ ನನ್ನ ಅಭಿಮಾನಿ ಬಳಗ ನಮ್ಮ ಹುಟ್ಟು ಹಬ್ಬದ ನೆಪದಲ್ಲಿ ಈ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಿದ್ದಾರೆ ಎಂದು ಹೇಳಿದರು.

ವಿವರಗಳಿಗಾಗಿ ಪ್ರಸನ್ನ (9964328254), ಮಂಜುನಾಥ (9901357771), ಪೂಜಾ (7795715047) ಹಾಗೂ ಬಸವರಾಜ್-9844119685 ಇವರುಗಳನ್ನು ಸಂಪರ್ಕಿಸಬಹುದು.

ಪತ್ರಿಕಾಗೋಷ್ಠಿಯಲ್ಲಿ ನಗರಸಭಾ ಸದಸ್ಯ ಎಸ್.ಎಂ.ವಸಂತ್, ತಾಪಂ ಮಾಜಿ ಅಧ್ಯಕ್ಷ ಟಿ.ಜೆ.ಮುರುಗೇಶಪ್ಪ, ಪ್ರಸನ್ನ, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

# ಶ್ರೀಲಂಕಾ : ಇಂಧನ ಕೊರತೆಯಿಂದಾಗಿ ಕಚೇರಿಗಳು, ಶಾಲೆಗಳು ಬಂದ್

ಕೊಲಂಬೊ, ಜೂ. 19 – ತೀವ್ರ ಇಂಧನ ಕೊರತೆಯಿಂದಾಗಿ ನಾಳೆ ಸೋಮವಾರದಿಂದ ಸಾರ್ವಜನಿಕ ವಲಯದ ಕಂಪನಿಯ ಕಚೇರಿಗಳನ್ನು ಮುಚ್ಚಲು ಶ್ರೀಲಂಕಾ ತೀರ್ಮಾನಿಸಿದೆ.

ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು ಸೋಮವಾರದಿಂದ ಆನ್‌ಲೈನ್ ಮೂಲಕವೇ ಕಾರ್ಯ ನಿರ್ವಹಿಸಬೇಕು ಎಂದೂ ಆದೇಶ ಹೊರ ಡಿಸಲಾಗಿದೆ ಎಂದು ಅಲ್ಲಿನ ಡೈಲಿ ಮಿರರ್ ಪತ್ರಿಕೆ ವರದಿ ಮಾಡಿದೆ. ಈಗಿರುವ ಇಂಧನ ದಾಸ್ತಾನು ಖಾಲಿಯಾಗುತ್ತಿದೆ. ಆಮದಿಗೆ ವಿದೇಶಿ ವಿನಿಮಯ ಪಾವತಿಸುವುದು ಶ್ರೀಲಂಕಾಗೆ ಕಠಿಣವಾಗುತ್ತಿದೆ. ಇದರಿಂದಾಗಿ ದೇಶದ ವಿವಿಧ ಆರ್ಥಿಕ ವಲಯಗಳು ಸ್ತಬ್ಧವಾಗಿವೆ. ದೇಶದ ಪೆಟ್ರೋಲ್ ಪಂಪ್‌ಗಳ ಬಳಿ ಜನರು ಪ್ರತಿಭಟನೆ ನಡೆಸುವ ಘಟನೆಗಳೂ ನಡೆಯುತ್ತಿವೆ. ಪೆಟ್ರೋಲ್‌ಗಾಗಿ ಜನರು ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ಇದೆ.

ಇಂಧನ ಪೂರೈಕೆಗೆ ಮಿತಿ ಇರುವ ಹಿನ್ನೆಲೆ ಯಲ್ಲಿ, ಸಾರ್ವಜನಿಕ ಸಾರಿಗೆ ವ್ಯವಸ್ಥೆ ದುರ್ಬಲವಾಗಿರುವ ಹಾಗೂ ಖಾಸಗಿ ವಾಹನಗಳ ಲಭ್ಯತೆ ಕಠಿಣವಾಗಿರುವ ಕಾರಣಕ್ಕಾಗಿ ಸೋಮವಾರದಿಂದ ಸೀಮಿತವಾಗಿ ಸಿಬ್ಬಂದಿ ಕಚೇರಿಗೆ ಬರಬೇಕು ಎಂದು ಲಂಕಾದ ಗೃಹ ಸಚಿವಾಲಯ ಆದೇಶಿಸಿದೆ.

ರಾಜಧಾನಿ ಕೊಲಂಬೊ ಮಿತಿಯಲ್ಲಿರುವ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು ಮುಂದಿನ ವಾರ ಕಾರ್ಯ ನಿರ್ವಹಿಸಬಾರದು. ಶಿಕ್ಷಕರು ಮನೆಯಿಂದಲೇ ಆನ್‌ಲೈನ್ ಮೂಲಕ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಲಾಗಿದೆ. ಲಂಕಾದಲ್ಲಿ ಕಳೆದ ಕೆಲ ತಿಂಗಳುಗಳಿಂದ ದಿನಕ್ಕೆ 13 ತಾಸು ವಿದ್ಯುತ್ ಕಡಿತ ಮಾಡಲಾಗುತ್ತಿದೆ.

ಇಂಧನ ಕೊರತೆ ಸಮಸ್ಯೆ ಬಗೆಹರಿಸಲು ರಷ್ಯಾದಿಂದ ಇಂಧನ ಆಮದು ಮಾಡಿಕೊಳ್ಳುವ ಬಗ್ಗೆಯೂ ಲಂಕಾ ಪ್ರಯತ್ನ ನಡೆಸಿದೆ.

# ಹೊನ್ನಾಳಿಯಲ್ಲಿ ಉದ್ಭವ ಮೂರ್ತಿ...



ಹೊನ್ನಾಳಿ, ಜೂ. 19- ಇಲ್ಲಿನ ಕಿತ್ತೂರು ರಾಣಿ ಚನ್ನಮ್ಮ ಸಮುದಾಯ ಭವನದ ಪಕ್ಕದಲ್ಲಿ ಭಾನುವಾರ ದಿಢೀರನೇ ಉದ್ಭವಿಸಿರುವ ದೇವರ ಶಿಲಾ ಮೂರ್ತಿ.

ರಾಶಿಗಟ್ಟಲೇ ಕಸ ಸುರಿಯುತ್ತಿದ್ದ ಜಾಗದಲ್ಲಿ ದಿಢೀರನೇ ದೇವರ ಮೂರ್ತಿ ಉದ್ಭವಿಸಿದ್ದು, ಇನ್ನಾದರೂ ಜನರು ಸ್ವಚ್ಛತೆಯ ಪಾಠ ಕಲಿಯುತ್ತಾರೋ, ಇಲ್ಲವೋ ಕಾದು ನೋಡಬೇಕಿದೆ.

# ಮುಗಿಯದ ಉಕ್ರೇನ್ ಸಮರ; ಕುಂದುತ್ತಿರುವ ಸೈನಿಕ ಸ್ಥೈರ್ಯ

ಕೀವ್, ಜೂ. 19 – ಉಕ್ರೇನ್‌ನಲ್ಲಿ ಕಳೆದ ನಾಲ್ಕು ತಿಂಗಳಿನಿಂದ ನಡೆಯುತ್ತಿರುವ ಭೀಕರ ಸಮರ, ಉಭಯ ಸೈನ್ಯಗಳ ನೈತಿಕ ಸ್ಥೈರ್ಯಕ್ಕೆ ಧಕ್ಕೆ ತರುತ್ತಿದೆ. ಸೈನ್ಯ ತೊರೆಯುವುದು ಹಾಗೂ ಅಧಿಕಾರಿಗಳ ಆದೇಶ ಉಲ್ಲಂಘನೆಯ ಪ್ರಕರಣಗಳು ಕಂಡು ಬರುತ್ತಿವೆ ಎಂದು ಬ್ರಿಟನ್ ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.

ಉಕ್ರೇನ್ ಹಾಗೂ ರಷ್ಯಾ ಪಡೆಗಳು ಡೊಂಬಾಸ್‌ನಲ್ಲಿ ಹೋರಾಟ ನಡೆಸುತ್ತಿವೆ. ಇಲ್ಲಿ ನೈತಿಕತೆಯಲ್ಲಿ ಏರುಪೇರಾಗಬಹುದು ಎಂದು ಬ್ರಿಟನ್ ರಕ್ಷಣಾ ಸಚಿವಾಲಯ ನಡೆಸಿರುವ ವಿಶ್ಲೇಷಣೆ ತಿಳಿಸಿದೆ.

ಇತ್ತೀಚಿನ ವಾರಗಳಲ್ಲಿ ಉಕ್ರೇನ್ ಸೈನಿಕರು ಸಮರ ಭೂಮಿ ತೊರೆಯುವುದು ಕಂಡು ಬಂದಿದೆ. ಆದರೆ, ರಷ್ಯಾ ಪಡೆಗಳ ಪರಿಸ್ಥಿತಿಯೂ ಭಿನ್ನವಾಗಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಇಡೀ ರಷ್ಯಾ ತುಕಡಿಗಳೇ ಆದೇಶಗಳನ್ನು (2ನೇ ಪುಟಕ್ಕೆ)

# ರಾಜ್ಯಕ್ಕೆ ಇಂದು ಪ್ರಧಾನಿ ಆಗಮನ



ನವದೆಹಲಿ, ಜೂ. 19 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಾಳೆ ಸೋಮವಾರ ರಾಜ್ಯಕ್ಕೆ ಭೇಟಿ ನೀಡಲಿದ್ದು, ಅಂತರರಾಷ್ಟ್ರೀಯ ಯೋಗ ದಿನಾಚರಣೆ ಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಅವರು ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಯೋಜಿಸಲಾಗಿರುವ ಯೋಗ ದಿನವನ್ನು ಪ್ರಧಾನಿ ಮೈಸೂರಿನಲ್ಲಿ ಉದ್ಘಾಟಿಸಲಿದ್ದಾರೆ. ಇದೇ ದಿನ ದೇಶದ 75 ಪ್ರಸಿದ್ಧ ತಾಣಗಳಲ್ಲಿ ಯೋಗಾಸನ ಪ್ರದರ್ಶನ ಆಯೋಜಿಸಲಾಗಿದೆ. ಇದರಲ್ಲಿ 75 ಕೇಂದ್ರ ಸಚಿವರುಗಳು ಭಾಗವಹಿಸಲಿದ್ದಾರೆ.

ಹಲವಾರು ಶೈಕ್ಷಣಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಇತರೆ ಸಾಮಾಜಿಕ ಸಂಘಟನೆಗಳಲ್ಲೂ ಯೋಗ ಕಾರ್ಯಕ್ರಮ ಆಯೋಜಿಸಲಾಗುವುದು.

79 ದೇಶಗಳು ಹಾಗೂ ವಿಶ್ವ ಸಂಸ್ಥೆಯ ಸಂಘಟನೆಗಳು ಹಾಗೂ ವಿದೇಶಗಳಲ್ಲಿರುವ ಭಾರತದ ರಾಯಭಾರಿ ಕಚೇರಿಗಳಲ್ಲೂ (2ನೇ ಪುಟಕ್ಕೆ)

# ಮನುಷ್ಯನ ದುರಾಸೆಗೆ ಪರಿಸರ ಹಾಳು

ಹರಪನಹಳ್ಳಿ, ಜೂ. 19- ಮನುಷ್ಯನ ಅತೀ ಆಸೆ, ಏರುತ್ತಿರುವ ಜನಸಂಖ್ಯೆ ವೈಭವೋಪೇತ ಜೀವನದ ಬಯಕೆಗಳು ಪರಿಸರ ಹಾಳು ಮಾಡುತ್ತಿವೆ. ನಮ್ಮ ಸುತ್ತಮುತ್ತಲಿನ ಪರಿಸರವನ್ನು ಮಕ್ಕಳಂತೆ ಪೋಷಿಸಿದಾಗ, ಪರಿಸರ ಉಳಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಪುರಸಭೆ ಸದಸ್ಯರೂ ಆದ ಬಿಜೆಪಿ ಮುಖಂಡ ಹರಾಳು ಅಶೋಕ ಹೇಳಿದರು.

ಪಟ್ಟಣದ ಆಚಾರ್ಯ ಲೇಔಟ್‌ನಲ್ಲಿರುವ ಗಣಪತಿ ದೇವಸ್ಥಾನದ ಮುಂಭಾಗ ಮತ್ತು ಬಾಪೂಜಿ ನಗರದ ಸಮೀಪದಲ್ಲಿರುವ ಸುಡುಗಾಡಿನಲ್ಲಿ ಹರಾಳು ಅಶೋಕರವರ ಹುಟ್ಟು ಹಬ್ಬದ ಅಂಗವಾಗಿ ಬಿಜೆಪಿ ಮುಖಂಡರ ನೇತೃತ್ವದಲ್ಲಿ ಸಸಿ ನೆಡುವ ಮೂಲಕ 52ನೇ ಹುಟ್ಟು ಹಬ್ಬವನ್ನು ಆಚರಿಸಿಕೊಂಡರು .

ಹರಪನಹಳ್ಳಿ ಪಟ್ಟಣವನ್ನು ಹಸಿರೀಕರಣಮಾಡುವ ಗುರಿಯನ್ನು ಹೊಂದಿದ್ದೇನೆ. ಮುಂದಿನ ದಿನಗಳಲ್ಲಿ ಸಾರ್ವಜನಿಕರು, ಸಂಬಂಧಪಟ್ಟ ಅಧಿಕಾರಿಗಳು ಸಲಹೆ, ಸಹಕಾರ ನೀಡಿದರೆ ಹರಪನಹಳ್ಳಿ ಪಟ್ಟಣವನ್ನು ಹಸಿರೀಕರಣ ಮಾಡುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ವಾಯುಮಾಲಿನ್ಯ :** ವಾಯು ಜೀವಧಾತು ಗಾಳಿಯಿಲ್ಲದಿದ್ದರೆ ಜೀವಸಂಕುಲ ಒಂದು ಕ್ಷಣವೂ ಈ ಭೂಮಿಯ ಮೇಲೆ (2ನೇ ಪುಟಕ್ಕೆ)

# ಸಿಕಂದರಾಬಾದ್ ಹಿಂಸಾಚಾರದ ಹಿಂದೆ ತರಬೇತಿ ಸಂಸ್ಥೆಗಳ ಕೈವಾಡ

ಹೈದರಾಬಾದ್, ಜೂ. 19 – ಸಿಕಂದರಾಬಾದ್ ರೈಲ್ವೆ ನಿಲ್ದಾಣದಲ್ಲಿ ನಡೆಸಲಾದ ಹಿಂಸಾಚಾರದ ಹಿಂದೆ ಸೈನ್ಯ ನೇಮಕಾತಿ ತರಬೇತಿ ಅಕಾಡೆಮಿಗಳ ಕೈವಾಡ ಇದೆ ಎಂದು ಶಂಕಿಸಲಾಗಿದ್ದು, 46 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಜೂನ್ 17ರಂದು ಸುಮಾರು 2 ಸಾವಿರ ಜನರು ಬಡಿಗೆ, ಕಬ್ಬಿಣದ ಸರಳು ಹಾಗೂ ಪೆಟ್ರೋಲ್ ಕ್ಯಾನ್ ಹಿಡಿದು ರೈಲ್ವೆ ನಿಲ್ದಾಣಕ್ಕೆ ಬಂದಿದ್ದರು. ಅವರು ರೈಲ್ವೆ ಆಸ್ತಿಗಳನ್ನು ಹಾಳು ಮಾಡಿದ್ದರು ಎಂದು ಪೊಲೀಸ್ ವರಿಷ್ಠಾಧಿಕಾರಿ ಬಿ. ಅನುರಾಧ ತಿಳಿಸಿದ್ದಾರೆ.

ಹಿಂಸಾಚಾರ ಹಾಗೂ ಧ್ವಂಸ ನಡೆಸುತ್ತಿದ್ದವರ ಮೇಲೆ ರೈಲ್ವೆ ಪೊಲೀಸರು ಗುಂಡು ಹಾರಿಸಿದಾಗ ಓರ್ವ ವ್ಯಕ್ತಿ ಮೃತಪಟ್ಟಿದ್ದ ಹಾಗೂ ಇತರೆ 13 ಜನ ಗಾಯಗೊಂಡಿದ್ದರು.

ಸೈನಿಕ ನೇಮಕಾತಿ ತರಬೇತಿ (2ನೇ ಪುಟಕ್ಕೆ)

# ಬಿಜೆಪಿ ಸರ್ಕಾರ ನನಗೆ ಅನುದಾನ ಕೊಡುತ್ತಿಲ್ಲ

## ಹರಿಹರದ ಅಂಜುಮನ್ ಗ್ರಂಥಾಲಯಕ್ಕೆ 5 ಲಕ್ಷ ರೂ. ಅನುದಾನ : ಶಾಸಕ ಎಸ್. ರಾಮಪ್ಪ



ಹರಿಹರ, ಜೂ. 19 - ನಗರದ ಅಂಜುಮನ್ ಇಸ್ಲಾಮಿಯಾ ಸಂಸ್ಥೆಯ ಅಡಿಯಲ್ಲಿ ಬರುವ ಶಾಲಾ, ಕಾಲೇಜುಗಳಿಗೆ ನನ್ನ ಅವಧಿಯಲ್ಲಿ ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿಸಿದ್ದೇನೆ. ಮುಂದಿನ ದಿನಗಳಲ್ಲಿ ಇಲ್ಲಿನ ಗ್ರಂಥಾಲಯಕ್ಕೆ 5 ಲಕ್ಷ ರೂಪಾಯಿ ಅನುದಾನ ಬಿಡುಗಡೆ ಮಾಡುವುದಾಗಿ ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದ ಅಂಜುಮನ್ ಎ ಇಸ್ಲಾಮಿಯ ಆಡಳಿತ ಕಛೇರಿ ಹಾಗೂ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಲ್ಪಸಂಖ್ಯಾತ ವರ್ಗದ ಜನರಿಗೆ ಸಾಕಷ್ಟು ಅನುಕೂಲ ಮಾಡುತ್ತಾ ಬಂದಿದ್ದೇನೆ. ಆದರೆ ನಮ್ಮ ಸರ್ಕಾರದ ಆಡಳಿತ ಇದ್ದಿದ್ದರೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅನುಕೂಲ ಮಾಡಬಹುದಿತ್ತು ಎಂದರು.

ಬಿಜೆಪಿ ಸರ್ಕಾರ ನನಗೆ ಯಾವುದೇ ರೀತಿಯ ಅನುದಾನ ಬಿಡುಗಡೆ ಮಾಡದೇ ಇರುವುದರಿಂದ ಹೆಚ್ಚಿನ ರೀತಿಯಲ್ಲಿ ಅನುಕೂಲ ಮಾಡಲು ಸಾಧ್ಯವಾಗಲಿಲ್ಲ. ಆದರೂ, ನಾನು ಹೋರಾಟ ಮಾಡಿ ಅಲ್ಪಸಂಖ್ಯಾತ ಸದಸ್ಯರಿಗೆ ಸಾಕಷ್ಟು ಅನುಕೂಲ ಮಾಡುವಲ್ಲಿ ಶ್ರಮಿಸಿದ್ದು, ಮುಂಬರುವ ಚುನಾವಣೆಯಲ್ಲಿ ನಾನು ಮತ್ತೊಮ್ಮೆ ಆಯ್ಕೆಯಾದರೆ, ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗುವುದಾಗಿ ಹೇಳಿದರು.

ಮುಸ್ಲಿಂ ಸಮುದಾಯದ ಧರ್ಮಗುರುಗಳಾದ ಖಾಜಿ ಸೈಯದ್ ಶಂಷುದ್ದೀನ್ ಸಾಬ್ ಮೌಲಾನಾ ಮಾತನಾಡಿ, ಅಂಜುಮನ್ ಇಸ್ಲಾಮಿಯಾ ಸಂಸ್ಥೆ ಉತ್ತಮ ಸಂಸ್ಥೆಯಾಗಿ ಬೆಳೆದಿದೆ. ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುವ ಅನೇಕ ವಿದ್ಯಾರ್ಥಿಗಳು ಉನ್ನತ ಪದವಿಯನ್ನು ಪಡೆದು ಉತ್ತಮ ಭವಿಷ್ಯ ರೂಪಿಸಿಕೊಂಡಿದ್ದಾರೆ ಎಂದರು.

ವಕ್ಫ್ ರಾಜ್ಯ ಸಮಿತಿಯ ಸದಸ್ಯ ಕೆ. ಅನ್ವರ್ ಬಾಷಾ ಮಾತನಾಡಿ, ರಾಜ್ಯದ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಕಟ್ಟಡದ ಅಭಿವೃದ್ಧಿಗೆ ಕೇಂದ್ರ ಸರ್ಕಾರ 5 ರಿಂದ10 ಕೋಟಿ ರೂ.ವರೆಗೆ ಅನುದಾನ ಬಿಡುಗಡೆ ಮಾಡುವಂತಹ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿಲ್ಲಾ ವಕ್ಫ್ ಮಾಜಿ ಅಧ್ಯಕ್ಷ ಸಿರಾಜ್ ಅಹ್ಮದ್, ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾ ಪೀರ್, ಸದಸ್ಯರಾದ ಶಂಕರ್ ಖಟಾವ್ಕರ್, ದಾದಾ ಖಲಂದರ್, ಬಾಬುಲಾಲ್, ಮುಜಾಮಿಲ್, ಅಬ್ದುಲ್ ಅಲಿಂ, ಎಸ್. ಎಂ. ವಸಂತ್, ಅಂಜುಮನ್ ಸಲಹಾ ಸಮಿತಿಯ ಬಿ. ಮೊಹಮ್ಮದ್ ಫೈರೋಜ್, ಆಸೀಫ್ ಜುನೇದಿ, ಶಬ್ಬೀರ್ ಹಳ್ಳಳ್ಳಿ, ನೂರ್ ಅಹ್ಮದ್. ಸೈಯದ್ ಮುನೀರ್, ಮುಸ್ಲಿಂ ಮುಖಂಡರಾದ ಜಬ್ಬಾರ್ ಸಾಬ್ ಹಳ್ಳಳ್ಳಿ, ಸಿಗ್ಬತ್ ಸಾಬ್, ಸೈಯದ್ ಎಜಾಜ್, ದಾದಾಪೀರ್ ಭಾನುವಳ್ಳಿ, ಉಮ್ಮರ್ ಬಾಷಾ ಕನವಳ್ಳಿ, ಮೊಹಮ್ಮದ್ ಆಲಿ ಮತ್ತಿತರರು ಉಪಸ್ಥಿತರಿದ್ದರು.

# ಲೈಂಗಿಕ ಶೋಷಣೆ ; ಹೆಣ್ಣು ಮಕ್ಕಳು ಕ್ರೀಡಾ ವಲಯಕ್ಕೆ ಬರಲು ಅಡ್ಡಿ : ಕ್ರೀಡಾ ವಲಯದ ಹಿರಿಯರ ಕಳವಳ

ನವದೆಹಲಿ, ಜೂ. 19 – ತರಬೇತುದಾರರು ಮಹಿಳಾ ಕ್ರೀಡಾಪಟುಗಳ ಮೇಲೆ ಲೈಂಗಿಕ ಶೋಷಣೆ ನಡೆಸುವ ಘಟನೆಗಳು ನಡೆದರೆ ಪೋಷಕರು ತಮ್ಮ ಹೆಣ್ಣು ಮಕ್ಕಳಿಗೆ ಕ್ರೀಡೆಯನ್ನು ಆಯ್ಕೆಯಾಗಿ ಮಾಡಿಕೊಳ್ಳಲು ಮುಂದಾಗದೇ ಇರಬಹುದು ಎಂದು ಕ್ರೀಡಾ ವಲಯದ ಹಿರಿಯರು ಕಳವಳ ವ್ಯಕ್ತಪಡಿಸಿದ್ದಾರೆ.

ಇಂತಹ ಘಟನೆಗಳನ್ನು ಅಧಿಕಾರಿಗಳು ಬುದ್ಧಿವಂತಿಕೆಯಿಂದ ನಿರ್ವಹಿಸಬೇಕು ಎಂಬುದು ಕ್ರೀಡಾ ವಲಯದಲ್ಲಿ ಕೇಳಿ ಬಂದಿರುವ ಸಾಮಾನ್ಯ ಅಭಿಪ್ರಾಯವಾಗಿದೆ.

ಸ್ಲೊವೇನಿಯಾದಲ್ಲಿ ಮುಖ್ಯ ತರಬೇತುದಾರ ಲೈಂಗಿಕ ಪೀಡನೆಯ ಯತ್ನ ನಡೆಸಿದ್ದಾಗಿ ಮಹಿಳಾ ಸೈಕ್ಲಿಸ್ಟ್ ಒಬ್ಬರು ದೂರಿದ್ದರು.

ಕ್ರೀಡಾಪಟು ಮನವಿಯ ಮೇರೆಗೆ ಭಾರತೀಯ ಕ್ರೀಡಾ ಪ್ರಾಧಿಕಾರ ಅವರನ್ನು ವಾಪಸ್ ಕರೆಸಿಕೊಂಡಿತ್ತು. ತನಿಖೆ ಎದುರಿಸುತ್ತಿರುವ ತರಬೇತುದಾರರನ್ನು ವಜಾಗೊಳಿಸಲಾಗಿತ್ತು.

ಮಹಿಳಾ ಕ್ರೀಡಾಪಟುಗಳ ಸುರಕ್ಷತೆಗೆ ಕ್ರಮ ತೆಗೆದುಕೊಳ್ಳುವಂತೆ ದೇಶದ ಉನ್ನತ ಬಿಲ್ಲುಗಾರ್ತಿಯಾದ ದೀಪಿಕಾ ಕುಮಾರಿ ಒತ್ತಾಯಿಸಿದ್ದಾರೆ.

ಈ ಘಟನೆ ಆಘಾತಕಾರಿ. ಇಂತಹ ವ್ಯಕ್ತಿಗಳನ್ನು ವಜಾಗೊಳಿಸಬೇಕು. ಕ್ರೀಡೆಯಲ್ಲಿ ಬಾಲಕ ಹಾಗೂ ಬಾಲಕಿಯರಿಬ್ಬರೂ ಒಂದೇ ವೇದಿಕೆಯಡಿ ಕಾರ್ಯ ನಿರ್ವಹಿಸುವ ಸಂಸ್ಕೃತಿ ಇದೆ. ಈ ವಲಯದಲ್ಲಿ ಸುರಕ್ಷಿತ ಭಾವನೆ ಇರಬೇಕು ಎಂದು ದೀಪಿಕಾ ತಿಳಿಸಿದ್ದಾರೆ.


ಇತ್ತೀಚಿನ ದಿನಗಳಲ್ಲಿ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ಕ್ರೀಡೆಗೆ ಕಳಿಸಲು ಹಿಂಜರಿಯುತ್ತಿದ್ದಾರೆ. ಇಂತಹ ಘಟನೆಗಳು ನಡೆಯುತ್ತಿದ್ದರೆ, ಅವರನ್ನು ಕಳಿಸದೇ ಇರಬಹುದು. ಹೀಗಾಗಿ ಕೃತ್ಯ ಎಸಗಿದವರನ್ನು ತಕ್ಷಣವೇ ವಜಾಗೊಳಿಸಬೇಕು. ಸುರಕ್ಷತೆ ಅತಿ ಮುಖ್ಯವಾಗಿದೆ ಎಂದವರು ತಿಳಿಸಿದ್ದಾರೆ.

ಮಹಿಳಾ ಕ್ರೀಡಾಪಟುಗಳು ದೇಶದಲ್ಲಿ ಇಲ್ಲವೇ ಹೊರಗೆ ಸ್ಪರ್ಧಿಸುವ ಸಂದರ್ಭದಲ್ಲಿ ಮಹಿಳಾ ತರಬೇತುದಾರರನ್ನು ತಂಡದಲ್ಲಿ ಸೇರ್ಪಡೆ ಮಾಡಿಕೊಳ್ಳುವುದನ್ನು ಕ್ರೀಡಾ ಪ್ರಾಧಿಕಾರ ಈಗಾಗಲೇ ಕಡ್ಡಾಯಗೊಳಿಸಿದೆ.

ಈ ಸೂಚನೆ ನೀಡುವುದಕ್ಕೆ ಮೊದಲೂ ಇದೇ ಪದ್ಧತಿ ಇತ್ತು ಎಂದಿರುವ ಶೂಟರ್ ಮನು ಭಕರ್, ಪ್ರಸಾದ ಸಂದರ್ಭದಲ್ಲಿ ಮಹಿಳಾ ತರಬೇತುದಾರರು ಸದಾ ಇರುತ್ತಿದ್ದರು. ಇತರೆ ಕ್ರೀಡೆಗಳಲ್ಲೂ ಇದೇ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದಿದ್ದಾರೆ.

ಕ್ರೀಡೆ ನಿರ್ವಹಣೆಯಲ್ಲಿ ಇನ್ನಷ್ಟು ಮಹಿಳೆಯರ ಸೇರ್ಪಡೆಯ ಅಗತ್ಯವಿದೆ ಎಂದು ಬಿ.ಸಿ.ಸಿ.ಐ. ಉನ್ನತ ಸಮಿತಿಯ ಸದಸ್ಯೆ ಹಾಗೂ ಕ್ರಿಕೆಟ್ ತಂಡದ ಮಾಜಿ ನಾಯಕಿ ಶಾಂತ ರಂಗಸ್ವಾಮಿ ಹೇಳಿದ್ದಾರೆ. (2ನೇ ಪುಟಕ್ಕೆ)




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte